Dr.B.K.Hiremath

ಡಾ.ಬಿ.ಕೆ. ಹಿರೇಮಠ



ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ

Dr.Siddhalingaswamy Hiremath

Karnataka Lalithakala Academy

ಡಾ.ಬಿ.ಕೆ. ಹಿರೇಮಠ

Dr. B. K. Hiremath

ಡಾ. ಸಿದ್ಧಲಿಂಗಸ್ವಾಮಿ ಅ. ಹಿರೇಮಠ

Dr. Siddhalingaswamy A Hiremath

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨

Dr. B.K. Hiremath A Monograph written by **Dr.Siddhalingaswamy Hiremath**
Published by V.N. Mallikarjuna Swamy, Registrar, Karnataka Lalithakala Academy, Kannada Bhavana, J.C.Road, Bengaluru-560 002
Ph: 080-22480297

First Edition	:	2008
Pages	:	viii + 52 + 20
Copies	:	1000
Price	:	Rs. 100/-

ಮುದ್ರಣ	:	೨೦೦೮
ಪುಟಗಳು	:	೮+೫೨+೨೦
ಪ್ರತಿಗಳು	:	೧೦೦೦
ಬೆಲೆ	:	೧೦೦/-
ಆಂಗ್ಲ ಅನುವಾದ	:	ಸಿ.ಎಸ್.ಶಶಿಧರ್
Translated by	:	C. S. Shashidhar

ಪ್ರಕಾಶಕರು
ವಿ.ಎನ್.ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು
ರಶ್ಮಿ ಪ್ರಿಂಟರ್ಸ್
ನಂ.೧೨ಬಿ, ಮೊದಲನೇ ಅಡ್ಡರಸ್ತೆ
ಕಲಾಸಿಪಾಳ್ಯ ಹೊಸಬಡಾವಣೆ
ಬೆಂಗಳೂರು-೫೬೦ ೦೦೨
ಮೊ : 99019 16581

ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸುತ್ತಿರುವ "ಕಲಾವಿದರ ಮಾಲೆ"ಯು ಕರ್ನಾಟಕದ ಖ್ಯಾತ ಕಲಾ ಸಾಧಕರನ್ನು, ಅವರ ಸಾಧನೆಗಳನ್ನು ಕಲಾಪ್ರಿಯ ಓದುಗರಿಗೆ ಪರಿಚಯಿಸುತ್ತ ಬಂದಿದೆ; ಜನಪ್ರಿಯವೂ ಆಗಿದೆ. ಅಕಾಡೆಮಿಯ ಇನ್ನಿತರ ಮೌಲಿಕ ಕಲಾಸಾಹಿತ್ಯ ಪ್ರಕಟಣೆಗಳಂತೆ ಈ ಮಾಲೆಯ ಹೊತ್ತಿಗೆಗಳಿಗೂ ಬಹು ಬೇಡಿಕೆಯಿರುವುದರಿಂದಲೂ ಕರ್ನಾಟಕದ ಕಲಾ ಭಂಡಾರಕ್ಕೆ ಅಮೂಲ್ಯವಾದ ಕಾಣಿಕೆ ನೀಡಿರುವ, ನೀಡುತ್ತಿರುವ ಕಲಾಸಾಧಕರ ಸಮಗ್ರ ಪರಿಚಯವನ್ನು ಕರ್ನಾಟಕದ ಕಲಾರಸಿಕರಿಗೆ ಮಾಡಿಕೊಟ್ಟು ಅವರನ್ನು ಗೌರವಿಸಿ, ಅವರ ಸಾಧನೆಗಳನ್ನು ದಾಖಲೀಕರಣಗೊಳಿಸುವುದು ಅಕಾಡೆಮಿಯ ಕರ್ತವ್ಯವಾಗಿದೆ. ಆದ್ದರಿಂದ ಈ ಮಾಲೆಯು ಸಾಧ್ಯವಿದ್ದಷ್ಟು ಸರಳ ರೀತಿಯಲ್ಲಿ ಆಯಾ ಕಲಾವಿದರನ್ನು ಪರಿಚಯ ಮಾಡಿಕೊಡುತ್ತ ಬಂದಿದೆ.

ಪ್ರಸ್ತುತ "ಡಾ.ಬಿ.ಕೆ. ಹಿರೇಮಠ"–ಎಂಬ ಈ ಕಿರು ಹೊತ್ತಗೆಯು ಪ್ರಕಟವಾಗುತ್ತಿದ್ದು ಅದನ್ನು ಅಕಾಡೆಮಿಯ ಸದಸ್ಯರಾದ ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ ಅವರು ಬರೆದುಕೊಟ್ಟಿದ್ದಾರೆ. ಸ್ವತಃ ಕಲಾವಿದರು, ಕಲಾ ಸಾಹಿತಿಗಳೂ ಆಗಿರುವ ಸಿದ್ಧಲಿಂಗಸ್ವಾಮಿ ಅವರು ಡಾ.ಬಿ.ಕೆ. ಹಿರೇಮಠರನ್ನು ತೀರ ಹತ್ತಿರದಿಂದ ಬಲ್ಲವರಾಗಿದ್ದರಿಂದ ಅವರ ವ್ಯಕ್ತಿತ್ವ ಮತ್ತು ಕಲಾಸೃಷ್ಟಿಗಳ ಪರಿಚಯವನ್ನು ಅತ್ಯಂತ ಸಮರ್ಥವಾಗಿ ಈ ಪುಸ್ತಕದಲ್ಲಿ ಮಂಡಿಸಿದ್ದಾರೆ. ಬಿ.ಕೆ.ಹಿರೇಮಠರು ಕರ್ನಾಟಕ ಸಂದರ್ಭದ ಬಹುಮಾನ್ಯ ಸಂಶೋಧಕರಲ್ಲೊಬ್ಬರಾಗಿದ್ದು ಅವರ ಸಂಶೋಧನೆಗಳ ಪರಿಚಯವನ್ನೂ ಲೇಖಕರು ಇಲ್ಲಿ ಮಾಡಿಕೊಟ್ಟಿದ್ದಾರೆ.

ಡಾ.ಬಿ.ಕೆ. ಹಿರೇಮಠರ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಪ್ರಥಮವಾಗಿ ಪ್ರಕಟಿಸಲು ಸಂತೋಷಪಡುತ್ತದೆ. ಅಕಾಡೆಮಿಯ ಪ್ರಕಟಣೆಗಳಿಗೆ ಕಲಾ ಸಾಹಿತ್ಯಾಭಿಮಾನಿಗಳಿಂದಲೂ, ಓದುಗರಿಂದಲೂ ಪ್ರೋತ್ಸಾಹ, ಉತ್ತೇಜನಗಳು ದೊರಕುತ್ತವೆಯೆಂದು ಅಕಾಡೆಮಿಯು ಆಶಿಸುತ್ತದೆ.

ಬೆಂಗಳೂರು

ವಿ.ಟಿ.ಕಾಳೆ

ನುಡಿ ಕನ್ನಡಿ

ಡಾ.ಸಿದ್ಧಲಿಂಗಸ್ವಾಮಿ ಅ. ಹಿರೇಮಠ

ಕರ್ನಾಟಕದ ದೃಶ್ಯಕಲೆಗೆ ಸುದೀರ್ಘ ಚಾರಿತ್ರಿಕ ಹಿನ್ನೆಲೆಯಿದೆ. ಪಾರಂಪರಿಕವಾಗಿ ಬಂದ ಸಾಂಪ್ರದಾಯಿಕ ಕಲೆಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಆಧುನಿಕತೆಯತ್ತ ಒಲವು ತೋರುತ್ತಿವೆ. ಇವುಗಳ ಪ್ರವರ್ತಕರ ಬಗ್ಗೆ ಕಲಾವಿದರಿಗಾಗಲಿ, ಸಹೃದಯರಿಗಾಗಲಿ ಯಾವುದೇ ಮಾಹಿತಿ ದೊರಕದು. ಏಕೆಂದರೆ, ನಮ್ಮ ಕಲಾಪರಂಪರೆಯ ಬೇರುಗಳನ್ನು ದಾಖಲೀಕರಿಸುವುದು ಅಥವಾ ಶೋಧಿಸುವುದು ಅವಜ್ಞೆಗೆ ಒಳಗಾಗಿದೆ. ಪಾಶ್ಚಾತ್ಯರಲ್ಲಿರುವ ದಾಖಲೀಕರಣ ಮತ್ತು ಶೋಧನೆಯ ಶಿಸ್ತು ನಮ್ಮಲ್ಲಿ ಬಹು ಗೌಣ. ನಮ್ಮ ಕಲಾವಿದರು ಕೇವಲ ಚಿತ್ರ ರಚನೆಗೆ ಮಾತ್ರ ತಮ್ಮ ಪ್ರಜ್ಞೆಯನ್ನು ಸೀಮಿತಗೊಳಿಸುತ್ತಾರೆ. ಬಹುಪಾಲು ಕಲಾವಿದರು ಓದುವಿಕೆಗೆ, ಬರೆಯುವಿಕೆಗೆ ಬೆನ್ನು ತೋರಿದ್ದರಿಂದ ಇತಿಹಾಸದ ರಚನೆ ಮತ್ತು ಗ್ರಹಿಕೆಗಳು ಉಪೇಕ್ಷಿಸಲ್ಪಟ್ಟಿವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಕೇಂದ್ರ ಲಲಿತಕಲಾ ಅಕಾಡೆಮಿಯ ಮಾದರಿಯಲ್ಲೇ ಕರ್ನಾಟಕ ಕಲಾವಿದರ ಪರಿಚಯಾತ್ಮಕ ಗ್ರಂಥಗಳನ್ನು ಪ್ರಕಟಿಸುವುದರ ಮೂಲಕ ನಮ್ಮ ನಡುವಿನ ಕಲಾವಿದರ ಬದುಕು, ಕಲಾಸೃಷ್ಟಿ ಮತ್ತು ಸಾಧನೆಗಳನ್ನು ನಮ್ಮ ಮುಂದಿನ ಪೀಳಿಗೆಯ ನಡುವೆ ಜೀವಂತವಾಗಿರಿಸುವ ಪ್ರಯತ್ನವನ್ನು ಮಾಡುತ್ತಿರುವುದು ಶ್ಲಾಘನೀಯ.

ಕರ್ನಾಟಕದ ಕಲಾವಲಯದಲ್ಲಿ ಹಿರಿದಾದ ಕಲಾಬರೆಹಗಳ ಮೂಲಕ ಗುರುತಿಸಲ್ಪಡುವ ಡಾ.ಬಿ.ಕೆ.ಹಿರೇಮಠರದು ನಿರಾಭಾರಿ ವ್ಯಕ್ತಿತ್ವ. ಪ್ರಚಾರಗಳಿಂದ ಬಹುದೂರವಾಗಿ ಉಳಿದ ಹಿರೇಮಠರು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಅಧ್ಯಯನ ಮತ್ತು ಅಧ್ಯಾಪನದಲ್ಲಿ ತೊಡಗಿಸಿಕೊಂಡವರು. ಜೊತೆಗೆ ಸಂಶೋಧನೆಯ ತುಡಿತವುಳ್ಳವರು. ಕನ್ನಡ ಸಾರಸ್ವತ ಲೋಕದ ವಿದ್ವತ್ ಮತ್ತು ಕಲಾ ಪರಂಪರೆಯಲ್ಲಿ ಒಬ್ಬರು. ಸಾಹಿತ್ಯದೊಂದಿಗೆ ಹಿರೇಮಠರು ಆಧುನಿಕ ಕಲಾಶೈಲಿಯ ಕಲಾಕೃತಿಗಳ ಮೂಲಕ ಕಲಾವಿದರಾಗಿಯೂ

ಬೆಳೆದು, ಛಾಪು ಮೂಡಿಸಿದ್ದು ಅವರ ವ್ಯಕ್ತಿ ವಿಶೇಷ. ಇದೀಗ ನಾನು ಸಿದ್ಧಪಡಿಸಿದ ಹಿರೇಮಠರ ಜೀವನ, ಕಲಾಸಾಧನೆ, ಕುರಿತ ಈ ಗ್ರಂಥವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸುತ್ತಿರುವುದು ಸಕಾಲಿಕ. ಅದಕ್ಕಾಗಿ ನಾನು ಅಭಾರಿಯಾಗಿದ್ದೇನೆ.

ಈ ಪುಸ್ತಕ ಪ್ರಕಟವಾಗುವಲ್ಲಿ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಶ್ರೀ ಎಂ.ಬಿ.ಬಸವರಾಜು, ಇಂದಿನ ಅಧ್ಯಕ್ಷರಾದ ಶ್ರೀ ವಿ.ಟಿ.ಕಾಳೆ, ರಿಜಿಸ್ಟ್ರಾರ್ ಎನ್. ಮಲ್ಲಿಕಾರ್ಜುನಸ್ವಾಮಿ ಅವರ ಎದೆತುಂಬಿದ ಸಹಕಾರದ ಹಿನ್ನೆಲೆ ಈ ಗ್ರಂಥಕ್ಕಿದೆ. ಜೊತೆಗೆ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕನ್ನಡದ ಕಲಾಬರಹಗಾರರಾದ ಡಾ.ಎಸ್.ಸಿ.ಪಾಟೀಲ, ಚಿ.ಸು.ಕೃಷ್ಣಸೆಟ್ಟಿ, ಡಾ.ಅ.ಲ.ನರಸಿಂಹನ್, ಶ್ರೀಯುತರಾದ ಎನ್. ಮರಿಶಾಮಾಚಾರ್, ಕೆ.ವಿ.ಸುಬ್ರಹ್ಮಣ್ಯಂ, ಕೆ.ಎಸ್. ಶ್ರೀನಿವಾಸಮೂರ್ತಿ, ಎಚ್.ಎ.ಅನಿಲ್‌ಕುಮಾರ ಹಾಗೂ ಅಕಾಡೆಮಿಯ ಸಿಬ್ಬಂದಿಗಳಾದ ಓ.ವೆಂಕಟೇಶ, ಎಚ್.ಎಸ್.ಗಂಗಾಧರ, ಆರ್.ಕೆ.ರಾಘವೇಂದ್ರ, ಮುತ್ತು ಅವರಿಗೆ ಚಿರಋಣಿಯಾಗಿದ್ದೇನೆ.

ಈ ಗ್ರಂಥ ರಚನೆಯ ಸಂದರ್ಭದಲ್ಲಿ ಚರ್ಚೆ, ಸಮಾಲೋಚನೆ ಮುಂತಾಗಿ ಎಲ್ಲ ಬಗೆಯ ಸಹಕಾರ ನೀಡಿದ ಡಾ.ಬಿ.ಕೆ. ಹಿರೇಮಠ ಅವರನ್ನು ನೆನೆಯದಿರಲಾರೆ.

ನನ್ನ ಕಲಾಬರಹ, ಕಲಾಸೃಷ್ಟಿ ಮತ್ತು ಬದುಕಿಗೆ ದಾರಿ ತೋರಿದ ಗುರು ಬಳಗ, ಬಾಳ ಬೆಳಕನಿತ್ತ ಮಾತಾಪಿತರಾದ ಶ್ರೀಮತಿ ಲೀಲಾವತಿ ಮತ್ತು ಪ್ರೊ.ಅ.ಸಿ.ಹಿರೇಮಠ ಮತ್ತು ಕುಟುಂಬ ವರ್ಗ, ಆತ್ಮಸಂಗಾತಿ ಡಾ.ವೀಣಾ,. ಚಿರಂಜೀವಿಗಳಾದ ಪ್ರಮದಾ, ಪ್ರಣೀತಾ ಮತ್ತು ಈ ಹೊತ್ತಿಗೆಯ ಅಂತರಂಗವನ್ನು ತಾಂತ್ರಿಕವಾಗಿ ಓರಣಗೊಳಿಸಿದ ಕು.ಮೀರಾ ವೈದ್ಯ ಇವರೆಲ್ಲರನ್ನೂ ಸದಾ ಕಾಲ ಸ್ಮರಿಸುವೆ.





೧. ಕಲಾವಿದ

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೇ ಜೀವನಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ ॥

ಜಗತ್ತು ಯಾರದೋ ಏನೋ, ನನಗೆ ಸಂಬಂಧಿಸಿದುದಲ್ಲ ಎಂದು ವ್ಯತ್ಯಾಸ ಮಾಡಬೇಡ. ಜೀವನವನ್ನು ಮತ್ತು ಚೇತನವನ್ನು ಗೌರವಿಸು. ಜೀವನ ಸಮೃದ್ಧಿಪಡಿಸುವುದಕ್ಕಾಗಿ ಹೋರಾಡು. ಅದೇ ನಿನ್ನ ಆತ್ಮದ ಉನ್ನತಿಗೆ ದಾರಿ.[೧]

ಡಿ.ವಿ.ಜಿ.ಅವರ ಈ ಬಗೆಯ ಧೋರಣೆಯನ್ನಿಟ್ಟುಕೊಂಡೇ ಡಾ.ಬಿ.ಕೆ.ಹಿರೇಮಠರು ಜೀವನವನ್ನು ಮತ್ತು ಚೇತನವನ್ನು ಸದಾಕಾಲ ಕಾಪಿಟ್ಟು ಗೌರವಿಸಿದವರು. ಜಗತ್ತು, ಮನುಷ್ಯ ಬದುಕಿನ ಗೂಢಾರ್ಥಗಳನ್ನು ಅರ್ಥೈಸಿಕೊಳ್ಳುತ್ತಲೇ ಆ ಗೂಢಾರ್ಥಗಳಿಗೆ ತಮ್ಮ ಕಲಾಕೃತಿಗಳಲ್ಲಿ ಒಂದು ಸ್ಪಷ್ಟ ರೂಪಣ ಕೊಟ್ಟ ಹಿರೇಮಠರು ನಡೆದು ಬಂದ ದಾರಿ ಬದುಕಿನ ದಟ್ಟ ಅನುಭವದಿಂದ ನಿರ್ಮಿತವಾದದ್ದು. ಅದೇ ಆತ್ಮೋನ್ನತಿಯ ದಾರಿ ಎಂದು ಕೂಡ ಭಾವಿಸಿಕೊಂಡವರು. ಅವರ ಚಿಂತನೆಯೇ ಅವರ ವ್ಯಕ್ತಿತ್ವದ ದರ್ಪಣ.



ಹಿರೇಮಠರನ್ನು ಬಲ್ಲವರಿಗೆ ಅವರು ತಮ್ಮ ಸುತ್ತಲಿನ ಅವಕಾಶಗಳನ್ನು ಬಳಸಿಕೊಳ್ಳಲಿಲ್ಲ. ಅವರದು ಒಂದು ಬಗೆಯ ಜಾಡ್ಯ ಎಂದು ಆಕ್ಷೇಪಿಸುವುದಿದೆ. ಆದಕ್ಕೆ ಅವರು ಅಂತರಂಗವನ್ನು ತೆರೆದಿಟ್ಟಿದ್ದು ಹೀಗೆ : "ಆಸಕ್ತಿ–ಅವಕಾಶಗಳು ಎಲ್ಲ ರೀತಿಯ ಅಭಿವ್ಯಕ್ತಿಗೆ ಕಾರಣವಾಗುತ್ತವೆ.

೧. ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ–ತಾತ್ಪರ್ಯ, ಪುಟ ೧೫೭

ಅನೇಕ ಸಂದರ್ಭಗಳಲ್ಲಿ ಆಸಕ್ತಿ ಇದ್ದರೂ ಅವಕಾಶ ದೊರೆಯದೇ ಅದು ಕಮರಿ ಹೋಗುವುದುಂಟು. ಅವಕಾಶಗಳು ತಾವಾಗಿಯೇ ಬರುವುದಿಲ್ಲ. ಅವನ್ನು ನಾವೇ ತಂದುಕೊಂಡು ಮುಂದುವರಿಯಬೇಕು–ಎಂಬುದು ಒಂದು ದಾರಿಯಾಗಿದ್ದರೂ ಅದು ನನ್ನ ಜಾಯಮಾನಕ್ಕೆ ಹೊಂದದ್ದು. ಆವರಿಸಿಕೊಳ್ಳುತ್ತ ಬಂದ ಜವಾಬ್ದಾರಿಗಳು, ವಿಚಿತ್ರ ಪರಿಸರ ನನ್ನನ್ನು ಕಟ್ಟಿ ಒಗೆದಂತೆ ಮಾಡಿದ್ದುಂಟು. ಆಗ ಒಂದು ನಿರ್ಧಾರಕ್ಕೆ ಬಂದೆ. ಕೆಲಸ–ಕರ್ತವ್ಯಗಳನ್ನು ಸಾಧ್ಯವಿದ್ದಷ್ಟು ಪ್ರಾಮಾಣಿಕವಾಗಿ ಮಾಡುವುದಷ್ಟೇ ನನಗೆ ಸಂಬಂಧಿಸಿದ್ದು; ಫಲಾಫಲಗಳ ಬಗೆಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಾಗದು ಎಂದು. ಹೀಗಾಗಿ ನನ್ನ ದೀರ್ಘಕಾಲದ ಸೇವಾವಧಿ ಅಧ್ಯಯನ–ಅಧ್ಯಾಪನ-ವಿದ್ಯಾರ್ಥಿಗಳ ರೂಪಣದಲ್ಲಿಯೇ ಕಳೆದುಹೋಯಿತು. ಆಗಲೇ ನನ್ನ ಓದು–ಚಿಂತನೆಗಳು ಇನ್ನೊಬ್ಬರ ಬೆಳವಣಿಗೆಗಾದರೂ ನೆರವಾದರ ಸಾಕು ಎಂದುಕೊಂಡೆ. ಆ ಪರಿಮಿತಿಯಲ್ಲಿಯೇ ಸಾಧ್ಯವಿದ್ದಷ್ಟು ಕೆಲಸ ಮಾಡಿದೆ. ಅದಕ್ಕಾಗಿ ನನಗೆ ವ್ಯಥೆಯಂತೂ ಇಲ್ಲ. ಆ ಎಲ್ಲವನ್ನೂ ಸಂತೋಷದಿಂದಲೇ ಮಾಡಿದ್ದು. ಅದರಲ್ಲಿಯೇ ಸಂತೋಷ ಕಂಡುಕೊಂಡದ್ದು. ಇದರಿಂದಾಗಿ ನನ್ನ ಆಸಕ್ತಿಗಳಾದ ಸಂಶೋಧನೆ, ಚಿತ್ರಕಲೆ, ಸಾಹಿತ್ಯ, ಬರವಣಿಗೆ ಈ ಕ್ಷೇತ್ರಗಳಲ್ಲಿ ಮಾಡಬೇಕಾದಷ್ಟು ಕೆಲಸವನ್ನು ಮಾಡಲಾಗಲಿಲ್ಲ".[೨] ಎನ್ನುತ್ತಾರೆ. ಈ ಮಾತುಗಳಲ್ಲಿ ಕಾಣಬರುವುದು ಹಿರೇಮಠರ ಮನುಷ್ಯ ಪ್ರೀತಿ, ಕಳಕಳಿ. ಅಷ್ಟೇ ಅಲ್ಲ....ಅದು ಅವರ ಕೃತಿಗಳಲ್ಲಿ ಕೂಡ ಗೋಚರ.

ಕನ್ನಡ ಭಾಷಾ ಅಧ್ಯಯನ–ಅಧ್ಯಾಪನ ಡಾ.ಹಿರೇಮಠರ ವೃತ್ತಿಯಾಗಿದ್ದರೂ, ಪ್ರವೃತ್ತಿ 'ಚಿತ್ರಭಾಷೆ' ಚೈತ್ರಮಾಸದಂತೆ ಮನದಲ್ಲಿ ಆಳವಾಗಿ ಬೇರೂರಿತ್ತು. ಆ ವರ್ಣಮಯ ಬದುಕು ಅರಳುವ ಹಿಂದೆ ಉತ್ತರ ಕರ್ನಾಟಕದ ಗ್ರಾಮ್ಯ ಪರಿಮಳ, ಆ ಮಣ್ಣಿನ ಗುಣವೂ ಕಾರಣ. ಗ್ರಾಮೀಣ ಪರಿಸರದಲ್ಲಿ ಕಾಣಬರುವ 'ಕ್ಯೂಬಿಸ್ಟ' ರೂಪಾಂಶಗಳೇ ಅವರ ಅಭಿವ್ಯಕ್ತಿ, ಅಂತಹುದೇ ನೇರ ನಡೆ–ನುಡಿ.

ಅದು ೧೯೪೦ರ ದಶಕ. ಧಾರವಾಡ ಕೇಂದ್ರೀಕೃತಗೊಂಡ ಅಂಗ್ರೇಜಿಗಳ ಆಡಳಿತ. ನವಾಬರು ಅಂಗ್ರೇಜಿಗಳಿಗೆ ಕಪ್ಪ–ಕಾಣಿಕೆಗಳನ್ನು ನೀಡಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ತವಕ. ಸವಣೂರು ಪ್ರಾಂತ್ಯದ ನವಾಬನೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಶೌರ್ಯ ಸಾಹಸಗಳನ್ನು ಪ್ರತಿಬಿಂಬಿಸುವಂತಹ ಭಿತ್ತಿಚಿತ್ರಗಳಿಂದ ಅಲಂಕೃತಗೊಂಡ ಬೃಹದಾಕಾರದ ಅರಮನೆಯ ಮಧ್ಯೆ ನವಾಬನ ಬದುಕು. ಇತ್ತ ಊರಲ್ಲಿ....ನವಾಬನ ಅಂಕೆಯೊಳಗೆ ಬದುಕುವ ಜನ. ಇವೆರಡರ ಮಧ್ಯೆಯೇ ಸ್ವಾತಂತ್ರ್ಯ ಸಂಗ್ರಾಮದ ಕಾರ್ಮೋಡಗಳು. ಇದು ಅಂದಿನ ದಿನಗಳ ಸವಣೂರು ಗ್ರಾಮದ ಚಿತ್ರಣ.



ಸವಣೂರು ಡಾ.ಬಿ.ಕೆ.ಹಿರೇಮಠರ ಜನ್ಮಸ್ಥಳ. ಅದು ಅವರ ತಾಯಿಯ ತವರು. ತಾಯಿ ಬಸವ್ವ "ಬಾದ್ದೂರ ಬಂಡಿ ಮುತ್ತಿನ ಪೆಂಡಿ ಶ್ಯಾನಭೋಗರ ಗುರುಸ್ವಾಮಿಮಠ"ದ

---

೨. ಡಾ. ಬಿ.ಕೆ.ಹಿರೇಮಠ : ಸೃಷ್ಟಿ, ಪು.ಸಂ.೧

ಮಗಳು. ಹನಕನಹಳ್ಳಿ ಹಿರೇಮಠದ ಕೆಂಡಯ್ಯನವರ ಧರ್ಮಪತ್ನಿ. ಈ ದಂಪತಿಗಳಿಗೆ ಜೇಷ್ಠ ಪುತ್ರನಾಗಿ ೧೯೪೧ ಜುಲೈ ೧೫ರಂದು ಹಿರೇಮಠರ ಜನನ. ತಂದೆ ಕೆಂಡಯ್ಯನವರಿಗೆ ಹುಲುಕೋಟಯಲ್ಲಿ ಹೊಲ-ಮನೆ. ಆದರೆ 'ಸಣ್ಣ ಮಾತೊಂದು' ಕಾರಣವಾಗಿ ಎಲ್ಲವನ್ನು ಬಿಟ್ಟು ಹೆಂಡಿರು ಮಕ್ಕಳೊಡನೆ ಕೆಲಸ ಹುಡುಕಿಕೊಂಡು ಗದುಗಿಗೆ ಸ್ಥಳಾಂತರಗೊಳ್ಳುತ್ತಾರೆ. ಹಿರೇಮಠ ತಂದೆ ತಾಯಿಯವರು ಶೈಕ್ಷಣಿಕವಾಗಿ ಹೆಚ್ಚು ವಿದ್ಯಾಂತರಲ್ಲದೇ ಇದ್ದರೂ ತುಂಬು ಸಂಸ್ಕಾರವಂತರು. ಅವರ ನಿತ್ಯದ ಧಾರ್ಮಿಕ ಆಚರಣೆಗಳು ಬಸಯ್ಯನವರ ಬಾಲ್ಯದಲ್ಲಿ ಗಾಢ ಪರಿಣಾಮ ಬೀರಿದವು. ಅವರ ಕಲಾಕೃತಿಗಳಲ್ಲಿ ಸಾಮಾನ್ಯವಾಗಿ ಕಾಣುವ ಧಾರ್ಮಿಕ ರೂಪಾಂಶಗಳು ಅವರ ಅಭಿವ್ಯಕ್ತಿಯ ಜೀವಾಳವಾಗಿ ನಿಂತಿವೆ. ಇಂಥ ಧಾರ್ಮಿಕ-ನಿರ್ಲಿಪ್ತ ಪರಿಸರದಲ್ಲಿ ಬಸಯ್ಯನ ಪೋಷಣೆಯಾಯ್ತು. ಮುಗ್ಧತೆಯನ್ನೇ ಹೊದ್ದುಕೊಂಡ, ಪ್ರಾಪಂಚಿಕ ಜೀವನದ ಕಪಟತೆಯ ಕರಿನೆರಳು ಸೋಕದ ಬಾಲ್ಯದ ದಿನಗಳೇ ಅತ್ಯಂತ ಸಂತೋಷದವು ಎನ್ನಲಾಗುತ್ತದೆ. ಇದಕ್ಕೆ ಹಿರೇಮಠರು ಹೊರತಾಗಿರಲಿಲ್ಲ.

ಬಸಯ್ಯನ ನಾಲ್ಕನೆಯ ವರ್ಗದವರೆಗಿನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಗಾವಟಿ ಶಾಲೆಯಲ್ಲಿ. ಅಂದರೆ ಅಂಬಾಭವಾನಿ ಗುಡಿಯಲ್ಲಿ. ಗರ್ಭಗುಡಿಯಲ್ಲಿನ ಅಂಬಾಭವಾನಿಯ ಸಂಗಮರವರಿ ಕಲ್ಲಿನ ಸುಂದರ ಮೂರ್ತಿ ಬಸಯ್ಯನ ಆಕರ್ಷಿಸಿದ್ದು ಸಹಜವೇ. ಶಾಲೆಯಲ್ಲಿ ಇತರ ವಿಷಯಗಳಿಗಿಂತ ಚಿತ್ರಿಸಲು ವಿಶೇಷ ಆಸಕ್ತಿ. ತಂದೆ ಕೆಂಡಯ್ಯನವರು ಹನುಮಂತನನ್ನು ಅತ್ಯಂತ ಸರಳವಾಗಿ ಚಿತ್ರಿಸುವುದನ್ನು ಬಸಯ್ಯನಿಗೆ ಕಲಿಸಿದ್ದೇ ಅವರ ಅದಮ್ಯ ಕಲಾಸಕ್ತಿಗೆ, ಮುಂದಿನ ಕಲಾಭ್ಯಾಸಕ್ಕೆ ನಾಂದಿಯಾಯಿತು. ಶಿಕ್ಷಕರಾದ ಶ್ರೀಯುತ ಉಮಚಗಿ ಅವರ ಪ್ರೀತಿಗೆ ಪಾತ್ರರಾಗುವುದಕ್ಕೂ ಕೂಡ ಬಸಯ್ಯ ಕರಿ ಹಲಗೆಯ ಮೇಲೆ ಚಿತ್ರಿಸುತ್ತಿದ್ದ 'ಸರಸ್ವತಿ' ಚಿತ್ರವೇ ಕಾರಣವಾಗಿತ್ತು. ಓಣಿಯ ಸುತ್ತಮುತ್ತ ಇದ್ದ ಕುಶಲಕರ್ಮಿಗಳು, ಓಣಿಯ ಹೆಣ್ಣುಮಕ್ಕಳು ಆಟಿಗೆ, ಕಸೂತಿ, ಬೆಳಂದಿಂಗಳ ಚಿತ್ರಗಳು, ಮಣ್ಣಿನ ಮೂರ್ತಿಗಳಿಗಾಗಿ ಹಬ್ಬ ಹರಿದಿನಗಳಲ್ಲಿ ಬಸಯ್ಯನನ್ನು ಹುಡುಕಿಕೊಂಡು ಬರುತ್ತಿದ್ದುದುಂಟು.

ಐದನೇ ತರಗತಿಗೆ ಸರಕಾರಿ ಶಾಲೆಯಲ್ಲಿ ಅಭ್ಯಾಸ. ಅಲ್ಲಿನ ಕಲಾ ಶಿಕ್ಷಕರಿಗೆ ಹಿರೇಮಠರ ಕಲಾಸಕ್ತಿ ಗೊತ್ತಿದ್ದರೂ 'ಬಡವ' ಫೀ ಕೊಡಲಾರ ಎಂಬ ಕಾರಣಕ್ಕಾಗಿ ಡ್ರಾಯಿಂಗ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸಲಿಲ್ಲ ಎಂಬ ಒಂದು ಘಟನೆ. ಇಂದಿಗೂ ಅವರ ಮನದಲ್ಲಿ ನಾಟಿ ನಿಂತಿದೆ. ಮುಂದೆ ಗದುಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಓದು. ಅಲ್ಲಿ ಟಿ.ಪಿ.ಅಕ್ಕಿಯವರು ಡ್ರಾಯಿಂಗ ಶಿಕ್ಷಕರಾಗಿದ್ದು ಅವರ ಮಾರ್ಗದರ್ಶನವಲ್ಲಿ ಮುಂಬೈ ಸರಕಾರದ ಎಲಿಮೆಂಟರಿ, ಇಂಟರ್ ಮೀಡಿಯಟ್ ಡ್ರಾಯಿಂಗ್ ಪರೀಕ್ಷೆಗಳನ್ನು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವುದರೊಂದಿಗೆ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ತಾಳುವಂತಾಯಿತು. ಜೊತೆಗೆ ಎಸ್.ಎಸ್.ಎಲ್.ಸಿ. ತೇರ್ಗಡೆ.



ಮುಂದೆ ಉನ್ನತ ಶಿಕ್ಷಣ ಪಡೆವ ಹಂಬಲ. ಕಾಲೇಜು ಶಿಕ್ಷಣ ಸೇರುವ ಸಂಭ್ರಮ. ಪೋಷಕರ ವಿರೋಧ. "ಕಲಿಯುವುದು ಬೇಡ ದಲಾಲಿ ಅಂಗಡಿಯಲ್ಲಿ ಕಾರಕೂನನಾಗು" ಎಂಬ ಆದೇಶ ! ತಂದೆಯವರ ನಿರುತ್ಸಾಹದ ಮಧ್ಯದಲ್ಲೇ ಹಠಮಾಡಿ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶ ಪಡೆದದ್ದು ಆಗಿತ್ತು. ಆದರೆ ಪರಿಣಾಮ ಅನುತ್ತೀರ್ಣ.

ಈ ಸಂದರ್ಭವೇ ಹಿರೇಮಠರ ಬದುಕಿನ ದಿಕ್ಕು ಸಂಪೂರ್ಣ ಬದಲಾಗಲು ಕಾರಣವಾಯಿತು. ವಿಜಯ ಕಲಾಮಂದಿರದ ಸಂಸ್ಥಾಪಕರಾದ ಟಿ.ಪಿ.ಅಕ್ಕಿಯವರು ಡ್ರಾಯಿಂಗ್ ಟೀಚರ್ ಸರ್ಟಿಫಿಕೇಟ್ ಕೋರ್ಸ್‌ಗೇ ಸೇರಲು ಒತ್ತಾಯಿಸಿದ್ದೇ ಅಮೃತ ಘಳಿಗೆ ಆಯಿತು. ಡಿ.ಟಿ.ಸಿ.ಪ್ರವೇಶ ಪಡೆದದ್ದೂ ಆಯಿತು. ನಿಷ್ಠೆಯಿಂದ ಕಲಾಭ್ಯಾಸದಲ್ಲಿ ತೊಡಗಿಸಿಕೊಂಡರು. ನಿತ್ಯ ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣದಲ್ಲಿ ಹಗಲು-ರಾತ್ರಿಯೆನ್ನದೇ ಅಂಕನೆ ಚಿತ್ರಗಳನ್ನು ಚಿತ್ರಿಸುವುದು. ಒಂದು ಕ್ಷಣವನ್ನು ವ್ಯರ್ಥವಾಗಿ ಕಳೆಯದೇ ನಿರಂತರ ಅಧ್ಯಯನ. ಪರಿಣಾಮವಾಗಿ ಡಿ.ಟಿ.ಸಿ.ಯಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್, ಸೆಕೆಂಡ್ ಇಯರ್ ಪೇಂಟಿಂಗನಲ್ಲಿ ಉನ್ನತ ವರ್ಗದಲ್ಲಿ ತೇರ್ಗಡೆ. ಪಿಯುಸಿ ಮತ್ತು ಸಂಗೀತ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾದರು. ಕೇವಲ ಒಂದೇ ವರ್ಷದಲ್ಲಿ ನಾಲ್ಕು ಕೋರ್ಸ್‌ಗಳನ್ನು ಏಕಕಾಲಕ್ಕೆ ತೇರ್ಗಡೆಯಾದದ್ದು ಹಿರೇಮಠರ ಬದುಕಿನ ಪರಿಶ್ರಮದ ಪರೀಕ್ಷೆಯಾದಂತೆ ಮಹತ್ವದ ಮಜಲು ಕೂಡ ಆಯಿತು.

ವಿಜಯ ಕಲಾಮಂದಿರದಲ್ಲೇ ಅಧ್ಯಾಪಕರಾಗಿದ್ದ ಶ್ರೀ ವಿ.ಟಿ.ಕಾಳೆಯವರು ಈ ಅವಧಿಯಲ್ಲಿ ಹಿರೇಮಠರಿಗೆ ಪ್ರಭಾವ ಬೀರಿದ ವ್ಯಕ್ತಿ. ಇವರ ಜೊತೆ ದಿವಂಗತ ಎಂ.ಎ.ಚೆಟ್ಟಿ, ದಿವಂಗತ ಸಿ.ಎನ್.ಪಾಟೀಲ ಮತ್ತು ಕಮಾನಗಾರ ಮೊದಲಾದ ಶಿಕ್ಷಕರು ನೀಡಿದ ವಿದ್ಯೆ ಕಲಿಸಿದ ಪಾಠಗಳನ್ನು ಈಗಲೂ ಸ್ಮರಿಸುತ್ತಾರೆ. ಇದೇ ಸಂದರ್ಭದಲ್ಲಿಯೇ ನಾಡಿನ ಶ್ರೇಷ್ಠ ಕಲಾವಿದರಾದ ನಾಡೋಜ ಆರ್.ಎಂ.ಹಡಪದ ಅವರ ಪರಿಚಯ ಒದಗಿ ಬಂತು. ಕಾಲೇಜಿನ ಬಿ.ಎ.ಅಧ್ಯಯನದ ಜೊತೆ ಜೊತೆಗೆ ಡ್ರಾಯಿಂಗ್, ಮಾಡೆಲಿಂಗ್ ಡಿಪ್ಲೋಮಾಗಳು ಹಾಗೂ ಆರ್ಟ್ ಮಾಸ್ಟರ್ ಪರೀಕ್ಷೆಗಳನ್ನು ಹೆಚ್ಚಿನ ಅಂಕ, ಪ್ರಶಸ್ತಿಗಳೊಂದಿಗೆ ತೇರ್ಗಡೆಯಾಗುತ್ತಾರೆ.

ಕಾಲೇಜು ಶಿಕ್ಷಣಕ್ಕಿಂತಲೂ ಉಚ್ಚಕಲಾ ಶಿಕ್ಷಣವನ್ನು ಪಡೆದು ಚಿತ್ರಕಲಾವಿದನಾಗಬೇಕೆಂದು ಬಯಸಿ ಹಿರೇಮಠರು ಮುಂಬೈಗೆ ಹೋಗುತ್ತಾರೆ. ಚಿತ್ರಕಲೆಗೆ ಪ್ರೋತ್ಸಾಹದ ತಾಣವಾದ ಮುಂಬೈ ಸರ್ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸಗೆ ಸರಿಸಾಟಿಯಾಗಿ ನಿಲ್ಲಬಲ್ಲ ನೂತನ ಕಲಾಮಂದಿರದ ಸ್ಥಾಪಕ ದಂಡಾವತಿಮಠರನ್ನು ಕಾಣಬಯಸುತ್ತಾರೆ. ಆದರೆ ದಂಡಾವತಿಮಠರು ಧಾರವಾಡದಲ್ಲಿರುವುದಾಗಿ ತಿಳಿದು, ಮರಳಿ ಧಾರವಾಡಕ್ಕೆ ಬಂದಾಗ ಅವರು ಮುಂಬೈಗೆ ವಾಪಸಾಗಿದ್ದರು. ಕಲಾವಿದನಾಗಿ ಭವಿಷ್ಯ ರೂಪಿಸಿಕೊಳ್ಳಬಯಸಿದ ಹಿರೇಮಠರ ಆಸೆಗೆ ತಾತ್ಕಾಲಿಕವಾಗಿ ಪೂರ್ಣವಿರಾಮ. ಕಲಾಭ್ಯಾಸದ ಆಸೆ ರೂಪಾಂತರ ಹೊಂದಿ ಗದುಗಿನ ಜೆ.ಟಿ.ಕಾಲೇಜಿನಲ್ಲಿ ಬಿ.ಎ.ಪದವಿ ಅಭ್ಯಸಿಸಲು ಮುಂದಾಗುತ್ತಾರೆ.



ಸ್ನಾತಕ ಪದವಿಯ ಸಂದರ್ಭದಲ್ಲಿಯೂ ಇಂತಹುದೇ ಪ್ರಸಂಗ ಪುನರಾವರ್ತನೆಯಾಗುತ್ತದೆ. ಹಿರೇಮಠರು ತಮ್ಮ ಆಸೆಯಂತೆ ಫಿಲಾಸಫಿ ಮತ್ತು ಲಾಜಿಕ್ ವಿಷಯಗಳನ್ನು ಆಯ್ಕೆಮಾಡಿಕೊಂಡರು. ಆದರೆ ಆ ವಿಷಯದ ಪ್ರಾಧ್ಯಾಪಕರು "ಇಡೀ ಕಾಲೇಜಿನಲ್ಲಿ ಈ ವಿಷಯಗಳನ್ನು ಆಯ್ಕೆಮಾಡಿಕೊಂಡ ನಿನಗೊಬ್ಬನಿಗೆ ಬೋಧಿಸಲು ಆಗದು" ಎಂದು ಹೇಳಿದಾಗ ಬೇರೆ ಸಾಧ್ಯತೆಗಳಿಲ್ಲದ ಕಾರಣ ಅನಂತರದ ಆಸಕ್ತಿ ಕನ್ನಡ ಸಾಹಿತ್ಯಾಧ್ಯಯನಕ್ಕೆ ಬಂದುದು, ಅವರು ಕನ್ನಡಕ್ಕೆ ದಕ್ಕಿದುದು, ಮುಂದೆ ಕಲೆ/ಸಾಹಿತ್ಯಗಳೆರಡನ್ನು ಸಮನಾಗಿ ತೂಗಿಸಿಕೊಂಡು ಹೋದುದು, ಅವರ ವ್ಯಕ್ತಿತ್ವ ವಿಶೇಷ.

ಜೆ.ಟಿ.ಕಾಲೇಜಿನಲ್ಲಿ ಹಿರೇಮಠರ ಕಲಾಭಿವ್ಯಕ್ತಿಗೆ ಅಪಾರ ಮನ್ನಣೆ ಇತ್ತು. ವಿಜ್ಞಾನ ವಿಭಾಗದ ಪ್ರಾಧ್ಯಾಪಕರುಗಳಾದ ಡಾ.ಬಾಗಲಕೋಟ ಮತ್ತು ಎಸ್.ಆರ್.ಪಾಟೀಲರ ಅಣತಿಯಂತೆ ಸುಮಾರು ೮-೧೦ ವಿಜ್ಞಾನಿಗಳ ಭಾವಚಿತ್ರಗಳನ್ನು, ಡಾ.ರುದರ್ ಫೋರ್ಡ ಎಂಬ ವಿಜ್ಞಾನಿಯ ಹಾಗೂ ಡಾ.ಎಸ್.ರಾಧಾಕೃಷ್ಣನ್ ಅವರ ೨X೩ ಅಡಿಯ ತೈಲ ವರ್ಣದ ಭಾವಚಿತ್ರಗಳನ್ನು ಕಾಲೇಜಿಗೆ ಕಾಣಿಕೆಯಾಗಿ ರಚಿಸಿಕೊಟ್ಟರು. ಹಿರೇಮಠರು ತಮ್ಮ ಪ್ರತಿಭೆಗೆ ಅಪಾರ ಮನ್ನಣೆಯನ್ನು, ವರ್ಷದ ಉತ್ತಮ ವಿದ್ಯಾರ್ಥಿ ಪ್ರಶಸ್ತಿಯನ್ನು ಪಡೆದು ಬಿ.ಎ. ಪದವೀಭೂಷಿತರಾಗುತ್ತಾರೆ.

ಆಗ ಮನೆಯಲ್ಲಿ ಅನೇಕ ಸಂಕಷ್ಟಗಳು. ಜೆ.ಟಿ.ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ ಡಾ.ಎಂ.ಎಸ್.ಲಠ್ಠೆಯವರು ಹಿರೇಮಠ ಅವರನ್ನು ಉನ್ನತ ವ್ಯಾಸಂಗಕ್ಕೆ ಹೋಗಲು ಪ್ರೇರೇಪಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗೆ ಪ್ರವೇಶ. ಇಲ್ಲಿನ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಯನ ಮಾಡುತ್ತಿರುವಾಗ ರಾಷ್ಟ್ರಕವಿ ಕುವೆಂಪು ಅವರು ವಿಭಾಗಕ್ಕೆ ಅತಿಥಿಯಾಗಿ ಆಗಮಿಸಿದರು. ಆಗ ಹಿರೇಮಠರು ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. ಕುವೆಂಪು ಅವರು 'ನಿಸರ್ಗ ಕವಿ' ಎಂಬ ಕಲ್ಪನೆಯನ್ನಿಟ್ಟುಕೊಂಡು, ವಿ.ವಿ.ಯ ಆವರಣದಲ್ಲಿದ್ದ ವಿವಿಧ ಹೂವುಗಳ ಪಕಳೆಗಳನ್ನು ಅಂಟಿಸಿ, ಕೊಲಾಜ ಮಾದರಿಯಲ್ಲಿ ರಚಿಸಿದ್ದ ಭಾವಚಿತ್ರವನ್ನು ಪ್ರದರ್ಶಿಸಿದ್ದರು. ಅದೇ ರೀತಿಯಾಗಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಗ್ರಂಥದಲ್ಲಿ ಕಾಣೆಯಾಗಿದ್ದ ಸೀತೆಗಾಗಿ ರಾಮ-ಲಕ್ಷ್ಮಣರು ಹುಡುಕುತ್ತಿರುವ ಸನ್ನಿವೇಶವನ್ನು ಚಿತ್ರರೂಪದಲ್ಲಿ ರಚಿಸಿ ಕುವೆಂಪು ಅವರಿಗೆ ನೀಡಿದ್ದರು. ಹಸಿರೇ ತುಂಬಿದ ಕಾಡಿನ ಮಧ್ಯೆ ಸೀತೆಯ ಧ್ವನಿಯನ್ನೋ, ಆಕೃತಿಯನ್ನೋ ವನದ ತುಂಬೆಲ್ಲ ಕಂಡು ಕೇಳಿ ಪರಿಭಾವಿಸಿದ ರಾಮ-ಲಕ್ಷಣರ ಅಂತಃಸ್ಥಿತಿಯನ್ನು ಬಿಂಬಿಸುವಂತೆ ಹಿನ್ನೆಲೆಯಲ್ಲಿ ಸೀತೆಯ ದೊಡ್ಡದಾದ ಮುಖ, ಮುಂದುಗಡೆ ರಾಮ-ಲಕ್ಷ್ಮಣರ ಹುಡುಕಾಟ ಬಿಂಬಿಸುವ ಚಿತ್ರ ಕೃತಿ ಅದಾಗಿತ್ತು. ಈ ಎರಡನ್ನು ಕಂಡು ಕುವೆಂಪು ತುಂಬ ಸಂತಸ ಪಟ್ಟ ಕ್ಷಣವದು.



ಇದೇ ಸಂದರ್ಭದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿ ಮುಂದೆ ಕುಲಪತಿಗಳಾಗಿದ್ದ ಸದಾಶಿವ ಒಡೆಯರ, ಡಾ. ಸೋಮಶೇಖರ ಇಮ್ರಾಪೂರ, ಡಾ.ಪಂಚಾಕ್ಷರಿ ಹಿರೇಮಠರ ಮುಂತಾದ ಸಾಹಿತಿಗಳ ಗ್ರಂಥಗಳಿಗೆ ಮುಖಪುಟ ವಿನ್ಯಾಸ ಮತ್ತು ಸಾಂದರ್ಭಿಕ ರೇಖಾಚಿತ್ರಗಳನ್ನು ರಚಿಸಿ, ಸ್ನಾತಕೋತ್ತರ ಅಧ್ಯಯನದಲ್ಲೂ ಕಲೆಯ ನಂಟು ಇಟ್ಟುಕೊಂಡದ್ದುಂಟು. ಸ್ನಾತಕೋತ್ತರ ಪದವಿಯನ್ನು ಕೂಡ ಹಿರೇಮಠರು ಪ್ರಥಮದರ್ಜೆಯಲ್ಲಿ ತೇರ್ಗಡೆಯಾದರು. ಸುವರ್ಣ ಪದಕವನ್ನು ಪಡೆದರು.

ಸ್ನಾತಕೋತ್ತರ ಪದವಿ ನಂತರ "ಕನ್ನಡ ಸಾಹಿತ್ಯದಲ್ಲಿ ಲಲಿತಕಲೆಗಳು" ಎಂಬ ವಿಷಯ ಕುರಿತಂತೆ ಡಾ.ಆರ್.ಸಿ.ಹಿರೇಮಠರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನಕ್ಕೆ ನೋಂದಣಿ. ಆದರೆ ಪರಿಸ್ಥಿತಿಯ ಒತ್ತಡದಿಂದಾಗಿ ಮುಂದುವರೆಸಲಾಗಲಿಲ್ಲ. ಇದರ ಮಧ್ಯವೇ ಶಾಸನ ಶಾಸ್ತ್ರದಲ್ಲಿ ಪಿ.ಜಿ.ಡಿಪ್ಲೋಮಾ, ಪ್ರಥಮ ವರ್ಗದಲ್ಲಿ ತೇರ್ಗಡೆ, ವಿಭಾಗಕ್ಕೆ ಎರಡನೆಯ ರ್‍ಯಾಂಕ್. ಮುಂದಿನ ದಿನಗಳಲ್ಲಿ ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಹಿರೇಮಠರು ಕನ್ನಡ ಪ್ರಾಧ್ಯಾಪಕರಾಗಿ ನೇಮಕ. ನಿವೃತ್ತಿ ನಂತರ ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾಗಿ ಸೇವೆ.

೧೯೬೪ರ ಸಂದರ್ಭವದು. ಕೇಂದ್ರ ಸರ್ಕಾರದ ಪಂಚವಾರ್ಷಿಕ ಯೋಜನೆಯಡಿಯಲ್ಲಿ ದಾವಣಗೆರೆಯಲ್ಲಿ ಸರ್ಕಾರಿ ಕರಕುಶಲ ಮತ್ತು ಕಲಾಶಾಲೆಯನ್ನು ಸ್ಥಾಪಿಸಿತು. ೧೯೭೪ರಲ್ಲಿ ಕಲಾಶಾಲೆಯ ಪ್ರಾಚಾರ್ಯರ ಹುದ್ದೆಗೆ ಅರ್ಜಿ ಆಹ್ವಾನಿಸಿ ಸಂದರ್ಶನಕ್ಕೆ ಕರೆಯಲಾಗಿತ್ತು. ಹಿರೇಮಠರೆ ಅಂದು ಅತ್ಯಧಿಕ ವಿದ್ಯಾರ್ಹತೆ, ಅರ್ಹತೆಯ ಅಭ್ಯರ್ಥಿಯಾಗಿದ್ದರೂ ಆಯ್ಕೆ ಸಂದರ್ಭದ ರಾಜಕೀಯದಿಂದಾಗಿ ಅದರಿಂದ ವಂಚಿತರಾದರು ಎಂದು ಹಿರೇಮಠರ ಸಮಕಾಲೀನರು, ಪ್ರಾಚಾರ್ಯ ಹುದ್ದೆ ಆಕಾಂಕ್ಷಿಗಳು ಹೇಳುತ್ತಾರೆ.

ಮುಂದಿನ ದಿನಗಳಲ್ಲಿ ಹಿರೇಮಠರು ಅಧ್ಯಯನ ಮತ್ತು ಅಧ್ಯಾಪನ ಮಾಡುತ್ತಲೇ ನಾಡಿನ ಹೆಸರಾಂತ ಸಂಶೋಧಕರಾದ ಡಾ.ಎಂ.ಎಂ.ಕಲಬುರ್ಗಿಯವರ ಮಾರ್ಗದರ್ಶನದಲ್ಲಿ ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಿದ್ಧಪಡಿಸಿ (೧೯೮೭) ಪಿಎಚ್.ಡಿ.ಪದವಿಯನ್ನೂ ಪಡೆಯುತ್ತಾರೆ. ಅನಂತರ ೯೦ರ ದಶಕದ ಅಂತ್ಯದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯವು ಹಿರೇಮಠ ಅವರಿಗೆ ಸಂಶೋಧನ ಮಾರ್ಗದರ್ಶನ ಹೊಣೆಗಾರಿಕೆಯನ್ನು ನೀಡಿತು. ಅವರು ಸಂಶೋಧನ ಮಾರ್ಗದರ್ಶಕರಾಗಿಯೂ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಅಳಿವಿನ ಅಂಚಿನಲ್ಲಿರುವ ದೊಕ್ಕಲು ಮಕ್ಕಳು, ಅದೃಶ್ಯಕವಿಯ ಜೀವನ ಮತ್ತು ಕೃತಿಗಳು, ಶಂಕರದಾಸಿಮಯ್ಯ ಪುರಾಣ ಇವು ನಡುಗನ್ನಡ ಸಾಹಿತ್ಯ ಸಂದರ್ಭದ ಅಲಕ್ಷಿತ ಜನಾಂಗ, ಕವಿ ಕೃತಿಗಳ



---

೩. ಡಾ.ಬಿ.ಆರ್.ಹಿರೇಮಠ (ಸಂ) : ನಿಜದ ನೆಲೆ (ಅಭಿನಂದನ ಗ್ರಂಥ)

ಕುರಿತ ಅಧ್ಯಯನಗಳು. ಬಸವೋತ್ತರ ಕಾಲದ ವಚನ ಸಾಹಿತ್ಯ, ಕರಸ್ಥಲ ಪರಂಪರೆ, ವಿಶಿಷ್ಟ ಅಧ್ಯಯನವಾದ ಸಾಹಿತ್ಯೋಕ್ತ ಅಪರಾಧ ದಂಡನೆಗಳು, ಬರಗೂರರ ಸಾಹಿತ್ಯಿಕ, ಸಾಂಸ್ಕೃತಿಕ ಸಂಘರ್ಷ ಕುರಿತಂತೆ ನಡೆದ ಸಂಶೋಧನಾ ಅಧ್ಯಯನಗಳು ಹಿರೇಮಠರ ಸಮರ್ಥ ಮಾರ್ಗದರ್ಶನದಲ್ಲಿ ರೂಪುಗೊಂಡವುಗಳು. ಹೀಗೆ ಪ್ರಾರಂಭವಾದ ಅವರ ಮಾರ್ಗದರ್ಶನದ ನಿಸ್ವಾರ್ಥ ಕೈಂಕರ್ಯ ಈಗಲೂ ನಡೆಯುತ್ತಲಿದೆ.

"ಕಲೆ-ಸಾಹಿತ್ಯ-ಸಂಶೋಧನೆ ನನ್ನ ಬದುಕಿನಲ್ಲಿ ಒಂದಾದ ದಾರಿಗಳು. ಆದರೆ ಬದುಕು ಯೋಚಿಸಿಕೊಂಡಿರುವುದಕ್ಕಿಂತಲೂ ಬಹಳ, ಬಹಳ ದೊಡ್ಡದು. ನನ್ನ ದೃಷ್ಟಿಯಲ್ಲಿ ಇಡಿಯಾಗಿ ಬದುಕನ್ನು ಅರಿಯುವುದು- 'ಪರಮಸತ್ಯ'ವರಿಯುವುದು ಒಂದೇ. 'ಪರಮ ಸತ್ಯ' ಎಲ್ಲೋ ಒಂದೆಡೆ ದೊರಕುವಂತಹದ್ದಲ್ಲ. ಅದು ನಮ್ಮಲ್ಲಿ, ನಮ್ಮ ಎಡ-ಬಲ, ಹಿಂದೆ-ಮುಂದೆ, ಮೇಲೆ-ಕೆಳಗೆ, ಎಲ್ಲೆಲ್ಲ ಅಸ್ತಿತ್ವ ಉಳ್ಳುದು. ಆದರೂ ಅದು ತನಗೆ ತಾನೇ ಕಾಣಿಸಿಕೊಳ್ಳುವುದಲ್ಲ. ನಿಷ್ಠೆಯ ಹುಡುಕಾಟವೇ ಅಲ್ಲಿಗೆ ನಮ್ಮನ್ನು ಕೊಂಡೊಯ್ಯಬಲ್ಲದು.[೩]" ಎಂಬುದು ಹಿರೇಮಠರ ದೃಢವಾದ ನಂಬಿಕೆ. ಈ ಹಿನ್ನೆಲೆಯಲ್ಲಿ ಅವರ 'ಸತ್ಯಕ್ಕೆ ಜಯ' ಚಿತ್ರ ಗಮನಾರ್ಹವಾಗಿರುತ್ತದೆ. ಹಿರೇಮಠರ ಬದುಕಿನ ಜಾಡನ್ನೂ ಪ್ರತಿನಿಧಿಸುತ್ತದೆ.

ಹಿರೇಮಠರದು ಇಂದಿಗೂ ಅದೇ ಸರಳತೆ. ಕುಂಚ-ಲೇಖನಿಗಳೆರಡರಲ್ಲೂ ವೈಚಾರಿಕ, ತಾತ್ವಿಕ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ ನಿರತ. ಹಿರೇಮಠರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೯೫ರ ಗೌರವ ಪ್ರಶಸ್ತಿಯನ್ನು ನೀಡಿ ಸಂಮಾನಿಸಿದೆ. ಅಷ್ಟೇ ಅಲ್ಲದೇ ಹಿರೇಮಠರಿಗೆ ೬೦ ತುಂಬಿದ ಸಂದರ್ಭದಲ್ಲಿ ಅವರ ಶಿಷ್ಯ ಸಂಕುಲ ಮತ್ತು ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ ಅಭಿನಂದನಾ ಸಮಾರಂಭವನ್ನು ಅದ್ದೂರಿಯಾಗಿ ಹಮ್ಮಿಕೊಂಡು, ಸಾವಿರಕ್ಕೂ ಹೆಚ್ಚಿನ ಪುಟದ 'ನಿಜದ ನೆಲೆ' ಎಂಬ ಅಭಿನಂದನಾ ಗ್ರಂಥವನ್ನು ಹಾಗೂ ಬಾಗಲಕೋಟೆಯ ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಹಿರೇಮಠರ ಲೇಖನಗಳನ್ನು ಒಳಗೊಂಡ ನಾಲ್ಕುನೂರಕ್ಕೂ ಹೆಚ್ಚು ಪುಟಗಳ 'ಸೃಷ್ಟಿ' ಗ್ರಂಥವನ್ನು ಪ್ರಕಟಿಸಿ ತಮ್ಮ ಮನದಾಳದ ಗೌರವವನ್ನು ತೋರಿವೆ. ಸಮಾರಂಭದಂದು ಅವರ ವಿದ್ಯಾರ್ಥಿಗಳು, ಅಭಿಮಾನಿಗಳು ತೋರಿದ ಪ್ರೀತಿ-ವಿಶ್ವಾಸಗಳಂತೂ ಅವರ್ಣನೀಯ.



೨. ಕಲಾಸೃಷ್ಟಿ

ಕವಿ ಚಿತ್ರಕೋವಿದನು ಪರತತ್ವ ಶೋಧಕನು ।
ವಿವಿಧ ವಾದನ ಗೀತ ನೃತ್ಯ ಕುಶಲಿಗಳು ॥
ನವನವತೆಯಿಯುಂ ಮನಸಿಗೀವೆಲ್ಲ ಕಲೆಗಾರ-।
ರವರಿಂದ ಸುಂದರತೆ - ಮಂಕುತಿಮ್ಮ ॥

"ಕವಿ, ಚಿತ್ರಕಾರ, ಪರತತ್ವವನ್ನು ಶೋಧಿಸುವನು, ವಿವಿಧವಾದ ವಾದನ, ನೃತ್ಯ ಮತ್ತು ಗೀತಕುಶಲಿಗಳು ಮನಸ್ಸಿಗೆ ನವ್ಯತೆಯನ್ನು ನೀಡುತ್ತಾರೆ ಮತ್ತು ಅವರಿಂದಲೇ ಈ ಪ್ರಪಂಚಕ್ಕೆ ಸುಂದರತೆ"[೧]. ಡಿ.ವಿ.ಜಿ.ಯವರು ಮೂಲತಃ ಕವಿಯಾಗಿದ್ದರೂ ಎಲ್ಲ ಲಲಿತಕಲೆಗಳ ಬಗ್ಗೆ ಕಲಾವಿದರ ಬಗ್ಗೆ ಅಪಾರ ಪ್ರೀತಿ, ಗೌರವವನ್ನು ಹೊಂದಿ ಅವುಗಳ ಮರ್ಮ ಅರಿತವರು. ಪ್ರಾಪಂಚಿಕ ಸೌಂದರ್ಯ ವೃದ್ಧಿಯಾಗುವಲ್ಲಿ ಕಲಾವಿದರ ಪಾಲ್ಗೊಳ್ಳುವಿಕೆ ಮುಖ್ಯವಾದುದು. ಕಲಾಕ್ರಿಯೆ ಎಂಬುದು ಆತ್ಮಕ್ಕೆ ಸಂಬಂಧಪಟ್ಟಿದ್ದು. ಅದೇ ಆತ್ಮೋನ್ನತಿಯ ಮಾರ್ಗವೂ ಹೌದು ಎನ್ನುವುದಾದರೆ ಆ ಅಭಿವ್ಯಕ್ತಿಯಲ್ಲಿ ಮನುಷ್ಯ, ಪ್ರಕೃತಿ, ಧರ್ಮ ಮುಂತಾದ ಪ್ರೀತಿಗಳಿಗೆ ಸ್ಥಾನವುಂಟು. ಆ ಮುಖೇನ ವ್ಯಕ್ತಿಗತ, ಸಂಶೋಧನಾತ್ಮಕ, ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ, ಮುಂತಾದ ಇನ್ನೂ ಅನೇಕ ನೆಲೆಗಳ ಲೇಖನಗಳು ಹಾಗೂ ದೃಶ್ಯಕಾವ್ಯಗಳು ಅಭಿವ್ಯಕ್ತಿ ಪಡೆಯುತ್ತವೆ. ಅಂಥಲ್ಲಿ, ಅಂಥವರಲ್ಲಿ ಆಂತರಿಕ ಸ್ವರೂಪದ ಒಲವು ನಿಲುವುಗಳು ಗೋಚರವಾಗುತ್ತವೆ.



ಹಿರೇಮಠರು ಹೇಳುವಂತೆ- ಭಾವನೆಗಳು ಕ್ರಿಯಾಶೀಲವಾದಾಗ ಚಿತ್ರ ದೃಶ್ಯವೊಂದು ಕಣ್ಮುಂದೆ ನಿಲ್ಲುತ್ತದೆ. ಸೃಜನಶೀಲವಾದ ಮನಸ್ಸು ಅದನ್ನು ಸಾಕಾರಗೊಳಿಸಲು ಯತ್ನಿಸುತ್ತದೆ.

೧. ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ-ತಾತ್ಪರ್ಯ, ಪು.ಸಂ.೧೫೬

ಮನಸ್ಸು, ಕಣ್ಣು, ಕೈಗಳು ಪರಸ್ಪರ ಸಹಕರಿಸುತ್ತವೆ. ಕಲಾಕೃತಿಯೊಂದು ಸಾಕಾರಗೊಳ್ಳುತ್ತದೆ. ಅಂಥ ಸೃಷ್ಟಿಯಲ್ಲಿ ಕಂಡ, ಕೇಳಿದ ಸಂಗತಿಗಳು ನನ್ನ ಓದು ಅನುಭವ, ಸಂಸ್ಕಾರಗಳ ಹಿನ್ನೆಲೆಯಲ್ಲಿ ಬೆರೆತು ಒಂದು ಕಲಾಕೃತಿಯಾಗಿ ಹುಟ್ಟು ಪಡೆಯುತ್ತದೆ.

ಹಿರೇಮಠರ ಕಲಾಕೃತಿಗಳ ಹಿಂದಿನ ತುಡಿತಗಳು ತಾತ್ಕಾಲಿಕ ಅನುಭೂತಿಗಿಂತ ಸಾರ್ವಕಾಲಿಕ ಮೌಲ್ಯಗಳತ್ತ ಮುಖ ಮಾಡಿದವುಗಳು. ಹಾಗಾಗಿ ಧರ್ಮ, ಮಾನವೀಯತೆ, ಮನುಷ್ಯತ್ವ, ಮುಂತಾದ ಬದುಕಿನ ನಿರಂತರ ಮೌಲ್ಯಗಳನ್ನು ಹಿಡಿದಿಡಲು ಮುಂದಾಗಿವೆ. ಹಾಗಿದ್ದರೆ ತಮ್ಮ ಕಲಾಕೃತಿಗಳು ಈ ಮೌಲ್ಯಗಳ ಬೋಧಕಗಳೆ? ಎಂಬ ಪ್ರಶ್ನೆಗೆ ಅವರು "ನಾನು ನನ್ನ ಕೃತಿಗಳ ಮೂಲಕ ಏನನ್ನೋ ಬೋಧಿಸಲು ಹೊರಡುವುದಿಲ್ಲ. ಆ ಮೌಲ್ಯಗಳನ್ನು ಒಬ್ಬ ಕಲಾವಿದನಾಗಿ ಅರ್ಥೈಸಿಕೊಳ್ಳಲೆತ್ನಿಸಿದ್ದೇನೆ. ಹಾಗಾಗಿ ನನ್ನ ಕೃತಿಗಳಲ್ಲಿ ಸಂಕೇತಗಳದೇ ಮೇಲುಗೈ. ಅದು ಕಲೆ, ಸಾಹಿತ್ಯಗಳ ಒಟ್ಟು ಅಧ್ಯಯನದ ಫಲವೂ ಆಗಿರಬಹುದು" ಎನ್ನುತ್ತಾರೆ.

ಆಧುನಿಕ ಸಂದರ್ಭದ ಕಲಾಕೃತಿಗಳಿಗೆ ಪೌರಾಣಿಕ ಸಂದರ್ಭ, ಪರಿಕಲ್ಪನೆಗಳನ್ನು ಅನ್ವಯಿಸುವುದು ಕಷ್ಟಸಾಧ್ಯವೆನಿಸುತ್ತದೆ. ಏಕೆಂದರೆ ಅದು ನೈಜ ರೂಪಾಂಶಗಳಿಗೆ ವಿರೂಪ ಸ್ಪರ್ಶ ನೀಡಿ, ತನ್ನ ಭಾವಚೈತನ್ಯವನ್ನು ತುಂಬುವಂಥದು. ಆಧುನಿಕ ಕಲಾಕ್ರಿಯೆ ಕಳೆದ ಶತಮಾನಗಳಿಂದ ಪ್ರಚಲಿತವಾಗುತ್ತ ಬಂದಿರುವಂತದು. ಹಿರೇಮಠರು ಸಾಂಪ್ರದಾಯಿಕ ಕಲೆ, ಸಾಹಿತ್ಯಾದಿಗಳನ್ನು ಅಕಾಡೆಮಿಕ್ ಆಗಿ ಅಧ್ಯಯನ ಮಾಡಿ, ಅದನ್ನು ಮೈಗೂಡಿಸಿಕೊಂಡವರು. ಆದರೆ ತಮ್ಮ ಅಭಿವ್ಯಕ್ತಿಗೆ ಅದನ್ನು ಆಧಾರವಾಗಿಸಿಕೊಂಡು ಆಧುನಿಕ ಕಲಾಶೈಲಿ, ತಂತ್ರಗಳನ್ನು ಬಳಸಿಕೊಳ್ಳಲು ಮುಂದಾದವರು. ಹಾಗಾಗಿ ಅವರ ಆಧುನಿಕ ನೆಲೆಯ ಕಲಾಕೃತಿಗಳಲ್ಲಿ ತಾತ್ವಿಕ, ಸೈದ್ಧಾಂತಿಕ, ಮಾನವಿಕ ಛಾಯೆ ಕಂಡುಬರುತ್ತದೆ. ಅವರ ಭಾವಚಿತ್ರಗಳಲ್ಲಿ ಮಾತ್ರ ಸಾಂಪ್ರದಾಯಿಕ ಒಲವು ಹಾಗೆ ಉಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಹಿರೇಮಠರವರ ಕಲಾಸೃಷ್ಟಿಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಪರಾಮರ್ಶಿಸಬೇಕಾಗುತ್ತದೆ.

ಹಿರೇಮಠರು ನೂರಾರು ಅಂಕನ ಚಿತ್ರಗಳನ್ನು ಪೆನ್ಸಿಲ್, ಪೆನ್, ಪೆನ್ ಅಂಡ್ ಇಂಕ್ ಮಾಧ್ಯಮಗಳಲ್ಲಿ ರಚಿಸಿದ್ದಾರೆ. ಹಾಗೆಯೇ ಜಲವರ್ಣ ಹಾಗೂ ತೈಲವರ್ಣ ಮಾಧ್ಯಮದಲ್ಲಿ ಭಾವಚಿತ್ರ, ನಿಸರ್ಗ ಚಿತ್ರಣ, ಸಂಯೋಜನೆಗಳನ್ನು ರಚಿಸಿದ್ದಾರೆ. ಅವರ ಹೆಚ್ಚಿನ ಕಲಾಕೃತಿಗಳು ಸಂಯೋಜನಾ ಚಿತ್ರಗಳೇ, ಹೆಚ್ಚಾಗಿ ತೈಲವರ್ಣ ಚಿತ್ರಗಳೇ. ಹಿರೇಮಠರ ಅನೇಕ ಚಿತ್ರಗಳು ದೇಶ, ವಿದೇಶಗಳ, ವ್ಯಕ್ತಿ, ಸಂಸ್ಥೆಗಳ ಸಂಗ್ರಹದಲ್ಲಿವೆ. ಅವುಗಳಲ್ಲಿ ಆಯ್ದ ಕೆಲವು ಕಲಾಕೃತಿಗಳನ್ನಿಲ್ಲಿ ಗಮನಿಸಬಹುದು.



ಕಲಾವಿದನ ಮಾನಸ ಚಿತ್ರ ಒಂದರ್ಥದಲ್ಲಿ ಅಮೂರ್ತ. ಜ್ಯಾಮಿತಿಯ ಮೂಲ ಆಕೃತಿಗಳಿಂದ ಕೂಡಿದ ಶ್ವೇತವರ್ಣದ ಹಿನ್ನೆಲೆಯ ಈ ಕೃತಿ ಮಾನಸದ ತುಡಿತಗಳನ್ನು ಪ್ರತಿನಿಧಿಸುವ ಆಶಯವುಳ್ಳದ್ದು. ಕಲಾವಿದನೊಬ್ಬನ ಮನಸ್ಸಿನಲ್ಲಿರುವ ರೂಪಗಳ ಸ್ವರೂಪವಾದರೂ ಯಾವ ಬಗೆಯವು ? ಎಷ್ಟು ಬಗೆಯವು? ಎಂಬ ಪ್ರಶ್ನೆಗಳ ತಾಕಲಾಟದ ಮನಸ್ಸಿನಲ್ಲಿ ರೇಖೆ, ಬಣ್ಣಗಳ ಹೊಯ್ದಾಟ ಹೊಂದಾಣಿಕೆ ಇದೆ. ಅವೇ ಕಲಾವಿದನೊಬ್ಬನ ಮಾನಸಿಕ ಅಭಿವ್ಯಂಜನಗಳ ಪ್ರತಿನಿಧಿ. ಚಿತ್ರದ ಅಲ್ಲಲ್ಲಿ ವಕ್ರ ರೇಖೆಗಳು ನೇರ ರೇಖೆಗಳನ್ನು ಛೇದಿಸಿದ ರೀತಿ; ವೃತ್ತಗಳ ಮಗ್ಗುಲಲ್ಲಿ ಹಾದು ಹೋಗುವ ಒರಟಾದ ನೇರ ರೇಖೆಗಳು, ಇಂತಹ ಆಕೃತಿಗಳ ಅರ್ಥಪೂರ್ಣ ರೂಪಿಕೆಗಳೇ ಒಟ್ಟು ಕಲಾಕೃತಿಗೆ ಮೂಲವಾಗುತ್ತದೆ. ದಟ್ಟ ವರ್ಣಗಳ ಬಾಹ್ಯ ಸ್ಪರ್ಶ. ಚಿತ್ರದಲ್ಲಿ ಪ್ರಧಾನವಾಗಿ ಕಾಣುವ ಹಳದಿ, ಕೆಂಪು, ನೀಲಿ ಪ್ರಧಾನ ವರ್ಣಗಳೇ ಕಲಾವಿದನ ಸೃಷ್ಟಿಯ ನೂರಾರು ವರ್ಣಗಳಿಗೆ ತಾಯಿ ವರ್ಣಗಳು. ಹೀಗೆ ಮೂಲ ಆಕೃತಿಗಳೇ, ಮೂಲ ವರ್ಣಗಳೇ ಒಂದರ್ಥದಲ್ಲಿ ಕಲಾವಿದನ ಮಾನಸ. ಕಲಾವಿದನ ಮಾನಸದಲ್ಲಿ ಕೆಡಹಿದ ಕ್ಷ ಕಿರಣದಂತಿರುವ ಈ ಕೃತಿ. ಭಾವಿಸಿದಷ್ಟು ಅರ್ಥವನ್ನು ಸ್ಫುರಿಸುತ್ತದೆ.

ದೇವರು ಮತ್ತು ಧರ್ಮಗಳು ಈ ಚಿತ್ರದಲ್ಲಿ ತ್ರಿಭುಜಾಕಾರವನ್ನು ಹೋಲುವ ಮಾನವ ಮುಖ ರೂಪಿಕೆ ಹಿರೇಮಠರ ಎಂದಿನ ರಚನಾ ಶೈಲಿಯಂತಿರುವ ಸೂರ್ಯನ ರಚನೆಯಲ್ಲಿ ದೇವರನ್ನು ಪ್ರಾತಿನಿಧಿಕವಾಗಿ ಸೂಚಿಸಿಸುತ್ತದೆ. ಹಿನ್ನೆಲೆಯಲ್ಲಿ ಆದಿ ಅಂತ್ಯಗಳಿರದ ಪ್ರವಾಹವೊಂದು ನಿಜಧರ್ಮವಾಹಿನಿಯಾಗಿ ಹರಡಿ ಹರಿಯುತ್ತಲಿದೆ. ಮುಂದುಗಡೆಯ ವಿವಿಧ ಆಕಾರದ, ವಿವಿಧ ಗಾತ್ರದ ಮಡಿಕೆಗಳು ವಿವಿಧ ಧರ್ಮಗಳನ್ನು ಪ್ರತಿನಿಧಿಸುತ್ತಿವೆ. ಎಲ್ಲ ಧರ್ಮಗಳ ಆಶಯ ಒಂದೇ ಆಗಿರುತ್ತದೆಯಾದರೂ ಮಡಿಕೆಗಳಲ್ಲಿನ ನೀರು ಮಡಿಕೆಯ ಆಕಾರವನ್ನು ಹೊಂದುವ ಹಾಗೆ ಧರ್ಮಗಳು ಅನೇಕವಾಗಿ ಕಾಣತೊಡಗುತ್ತವೆ. ಆದರೆ ಎಲ್ಲ ಪಾತ್ರೆಗಳಲ್ಲಿರುವುದು ಅದೇ ನೀರು. ಸೂರ್ಯ ಒಬ್ಬನೆ. ನೂರಾರು ಮಡಿಕೆಗಳ ನೀರಿನಲ್ಲಿ ಅದೇ ಒಬ್ಬ ಸೂರ್ಯನ ಪ್ರತಿಬಿಂಬ, ಹಾಗೆ ದೇವ ಒಬ್ಬನೆ, ಧರ್ಮಗಳು ಹಲವಾರು ಎಂಬ ವಾಸ್ತವ ಸಂದೇಶವನ್ನು ಹಿರೇಮಠರು ಇಲ್ಲಿ ನೀಡುತ್ತಾರೆ. ಮಡಿಕೆಗಳನ್ನು ಪಾರದರ್ಶಕವಾಗಿ ಕಂಡುಬರುವಂತೆ ಅವುಗಳನ್ನು ಒಂದರ ಹಿಂದೆ-ಮುಂದೆ ಸಂಯೋಜಿಸಿದ್ದಾರೆ. ಎಂದಿನಂತೆ ದಟ್ಟವಾದ ಬಾಹ್ಯರೇಖೆಗಳ ಮುಖಾಂತರ ಆಕೃತಿಗಳನ್ನು ಸ್ಪಷ್ಟವಾಗಿಸುವ ಹಿರೇಮಠರು ಚಿತ್ರದ ಹಿನ್ನೆಲೆಯ ಅವಕಾಶವನ್ನು ಹಾಗೆ ಬಿಟ್ಟಿದ್ದಾರೆ. ಇಂತಹ ಧಾರ್ಮಿಕ, ಆಧ್ಯಾತ್ಮಿಕ, ತಾತ್ತ್ವಿಕ ಒಲವುಗಳು ಹಿರೇಮಠರ ಈ ಕೃತಿಯ ಅಭಿವ್ಯಂಜನಗಳಾಗಿವೆ.

ಸತ್ಯಕ್ಕೆ ಜಯ ಇದು ಸತ್ಯ ನಿಷ್ಠುರವಾದುದು. ಅಸತ್ಯ ತಾತ್ಕಾಲಿಕ ತೃಪ್ತಿಯನ್ನು ನೀಡುವಂತಹದ್ದು. ಒಂದು ಬಗೆಯಲ್ಲಿ ತತ್ತ್ವಾಧಾರಿತ ಚಿತ್ರವಿದು. ಸತ್ಯಾನ್ವೇಷಣೆಯಲ್ಲಿ



ಜಯ ಸಾಧಿಸಿರುವುದನ್ನು ಶ್ವೇತವರ್ಣದ ಮುಖವೇ ಪ್ರಧಾನವಾದ ಮಾನವಾಕೃತಿಯಲ್ಲಿ ಕಂಡರೆ, ಅಸತ್ಯದ ಹೀನಾಯ ಸೋಲನ್ನು ದಟ್ಟ ವರ್ಣದ ಅಂತಹದೇ ಆಕೃತಿಯಲ್ಲಿ ಕಾಣಬಹುದು. ಚಿತ್ರದ ಹಿನ್ನೆಲೆಯನ್ನು ವಿವಿಧ ಛಾಯೆಗಳ ಮುಖಾಂತರ ಭೇದಗೊಳಿಸಿರುವ ಕ್ರಮ ಇಲ್ಲಿದೆ. ವರ್ಣಗಳಲ್ಲಿ ವೈವಿಧ್ಯತೆಯನ್ನು ಗೌಣವಾಗಿಸಿ ಏಕತಾನತೆಯನ್ನು ಕಾಯ್ದುಕೊಳ್ಳಲಾಗಿದೆ. ಹಿರೇಮಠರು ತಮ್ಮ ಬದುಕಿನುದ್ದಕ್ಕೂ ಕಂಡುಕೊಂಡ ಅಸತ್ಯದ ಮೇಲೆ ಸತ್ಯ ಸವಾರಿ ಮಾಡುವ ಆತ್ಮನಿವೇದನೆಯ ಚಿತ್ರವಿದು.

ಸತ್ಯದ ಸಹನೆ ಶೀರ್ಷಿಕೆಯ ಈ ಚಿತ್ರ ಸತ್ಯ ಅ–ಪರಾಜಿತ ಎನ್ನುವ ಭಾವವನ್ನು ಕೊಡುತ್ತದೆ. ಚಿತ್ರದಲ್ಲಿ ಎರಡು ಹಸ್ತಗಳ ಹೊರತಾಗಿ ದೇಹಕ್ಕೆ ಅವಕಾಶವಿಲ್ಲ. ಓರೆಯಾಗಿ ವಾಲಿರುವ, ಮುಳ್ಳಿನ ಕಿರೀಟ ಸುತ್ತುವರೆದಿರುವ ಶಿಲುಬೆ ಚಿತ್ರ ಮೊದಲ ನೋಟಕ್ಕೆ ದಕ್ಕುವ ವಸ್ತು. ಸತ್ಯದ ಪೈರು ಅಸತ್ಯದ ಕರಿಮೋಡದಡಿ ಕೆಲವೊಮ್ಮೆ ಮಸುಕಾದಂತೆ ಕಂಡುಬಂದರೂ ಅದು ಎಂದಿಗೂ ಚಿರಾಯು. ಅಂತೆಯೇ ಹಲವಾರು ಅಡೆತಡೆಗಳ ಮಧ್ಯವೂ ಸತ್ಯದ ಫಸಲು ಬೆಳೆಯುತ್ತದೆ. ಏಸುಕ್ರಿಸ್ತನ ಬದುಕಿನ ಅಂತ್ಯವನ್ನು ಸಾಂಕೇತಿಕವಾಗಿ, ದೃಶ್ಯಾತ್ಮಕವಾಗಿ ಪ್ರಸ್ತುತಿಪಡಿಸುವ ಸಂಯೋಜನೆ ಇದಾಗಿದೆ. ಪ್ರಸ್ತುತ ಚಿತ್ರದಲ್ಲಿ ಹಿನ್ನೆಲೆಯ ಅವಕಾಶವನ್ನು ಮೂರು ಭಾಗಗಳನ್ನಾಗಿ ವಿಭಜಿಸಿಕೊಳ್ಳಲಾಗಿದೆ. ಕೆಳಗಿನ ಭಾಗದಲ್ಲಿ ಕಪ್ಪುವರ್ಣವನ್ನು ಉಪಯೋಗಿಸಿಕೊಂಡು ಪಸಿರು ವರ್ಣದ ಪಾಪಾಸುಕಳ್ಳಿ ಮುಳ್ಳಿನ ಗಿಡವನ್ನು ಚಿತ್ರಿಸಲಾಗಿದೆ. ಇದು ಏಸುವನ್ನು ಹಿಂಸಿಸಿದ ಮನಸ್ಸುಗಳಿಗೆ ಸಂಕೇತವಾಗಿ ನಿಲ್ಲುತ್ತದೆ. ಮಧ್ಯಭಾಗದ ಪಟ್ಟಿಕೆಯನ್ನು ಶ್ವೇತವರ್ಣದಿಂದ ಹಾಗೂ ಮೇಲಿನ ಪಟ್ಟಿಕೆಯನ್ನು ನೀಲಿವರ್ಣದಿಂದ ಅನಂತದ, ಆಕಾಶದ ಭಾವ ಬರುವಂತೆ ಚಿತ್ರಿಸಲಾಗಿದೆ. ಮುಳ್ಳುಗಳ ಮಧ್ಯೆ ಶಿಲುಬೆಯನ್ನು ಓರೆಯಾಗುವಂತೆ ನಿಲ್ಲಿಸಲಾಗಿದ್ದು, ಶಿಲುಬೆಗೆ ಜಡಿದ ಮೊಳೆಗಳಿಂದ ನೆತ್ತರು ತೊಟ್ಟಿಕ್ಕುತ್ತಿರುವಂತೆ ಚಿತ್ರಿಸಲಾಗಿದೆ. ಹಿಂದು ಪರಂಪರೆಯಲ್ಲಿನ 'ಅಭಯ' ಮತ್ತು 'ವರದ ಹಸ್ತಗಳು' ಶಿಕ್ಷಿಸಿದವರನ್ನೂ ಕ್ಷಮಿಸು ಎಂಬ ಏಸುವಿನ ಅಂತರಂಗಕ್ಕೆ ಕನ್ನಡಿಯಾಗುತ್ತವೆ. ಎರಡು ಭಿನ್ನ ಸಂಸ್ಕೃತಿಗಳ ಸಂಕೇತಗಳ ಸಮೀಕರಣ ಈ ಚಿತ್ರದ ವಿಶೇಷ.


ಮಾನವೀಯತೆಯ ಕೈಗಳು ಚಿತ್ರ ಸಂಯೋಜನಾ ದೃಷ್ಟಿಯಿಂದ ನೋಡುಗರ ಮನದಲ್ಲಿ ಒಂದು ರೀತಿಯ ಅವ್ಯಕ್ತ ಭಾವವನ್ನು ಉಂಟುಮಾಡುವ ಕೃತಿ. ಹಿರೇಮಠರ ಮನೋಧರ್ಮಕ್ಕನುಗುಣವಾಗಿ ರಚಿಸಲ್ಪಟ್ಟದ್ದು. ಮಾನವೀಯತೆಯ ಆಧಾರದ ಮೇಲೆ ಧರ್ಮ ಸಂವಿಧಾನ ರೂಪುಗೊಂಡಿರುತ್ತದೆ. ಜಾಗತಿಕ ಶಾಂತಿಯನ್ನು ಕದಡುವ ಸಂದರ್ಭದಲ್ಲಿ ಮಾನವೀಯತೆ ಮರೆಯದಿದ್ದರೆ ಮಾನವ ಸಂಕುಲ ಸರ್ವನಾಶ. ಈ ಚಿತ್ರದಲ್ಲಿ ಜಾಗತಿಕ ಯುದ್ಧದ ಅಣುಬಾಂಬ್ ಸಂದರ್ಭಗಳು ಮನುಕುಲವನ್ನೇ ವಿನಾಶದ ಅಂಚಿಗೆ ತಂದು ನಿಲ್ಲಿಸುತ್ತವೆ. ಆಗ ಮನುಕುಲದ ಕಣ್ಣಲ್ಲಿ ಹರಿಯುವದು ಕಣ್ಣೀರಲ್ಲ–ರಕ್ತವೇ. ಆದರೆ, ಜಗತ್ತು ಇಂಥ ಸಂಕಷ್ಟದಲ್ಲಿ ಸಿಕ್ಕಾಗಲೆಲ್ಲ ಜಗತ್ತನ್ನು ಧರ್ಮರೂಪಿ ಮಾನವೀಯತೆಯ ಕೈಗಳು



ಕಾದಾಡುತ್ತವೆ. ಇಲ್ಲಿ ಜಗತ್ತಿನ ವಿವಿಧ ಧರ್ಮ ಮಹಾಪುರುಷರನ್ನು ಸಂಕೇತಿಸುವ ಚಿಹ್ನೆಗಳನ್ನು ಸಂಯೋಜಿಸಿದ್ದು ಕೈಗಳ ರಕ್ಷಣೆಯ ಮಧ್ಯ ಮಾನವೀಯತೆಯ, ಶಾಂತಿಯ ಸಂಕೇತ ಬಿಳಿಪಾರಿವಾಳ ಚಿತ್ರಿತವಾಗಿದೆ. ಮಾನವೀಯತೆಗೆ ಆಪತ್ತು ಬಂದಾಗಲೆಲ್ಲ ಈ ಕೈಗಳು ಅದನ್ನು ತಪ್ಪದೇ ರಕ್ಷಿಸುತ್ತ ಬಂದಿವೆ ಎಂಬುದು ಇಲ್ಲಿನ ಸಂದೇಶ. ಚಿತ್ರದ ಆಶಯವನ್ನು ಸಮರ್ಥಯುತವಾಗಿ ಈಡೇರಿಸಲು ಕೈಗಳನ್ನು ರಕ್ಷಣಾತ್ಮಕ ನೆಲೆಯಲ್ಲಿ ರಚಿಸಲಾಗಿದೆ. ಇದರ ಅರ್ಥ ಎಲ್ಲ ಧರ್ಮಗಳು ಮನುಕುಲದ ಒಳಿತಿಗೆ ಸ್ಪಂದಿಸುವ ಮಹಾಪುರುಷರ ಮಾನವೀಯ ನೆಲೆಯಲ್ಲಿ ಕೈಜೋಡಿಸಿದರೆ ವಿಶ್ವದಲ್ಲಿ ಶಾಂತಿ ನೆಲಸಬಹುದು. ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವ ವಿಶ್ವ ಸಂಸ್ಕೃತಿಯ ಪ್ರತಿನಿಧಿ ಈ ಕೃತಿ. ಸಾಂಕೇತಿಕವಾಗಿ ದುಡಿಸಿಕೊಂಡ ಸರಳವಾದ, ದೃಢವಾದ ರೇಖೆಗಳು ಮತ್ತು ಅರ್ಥಪೂರ್ಣವಾದ ಸೌಮ್ಯ ವರ್ಣಗಳ ಬಳಕೆ ಈ ಕಲಾಕೃತಿಯ ವೈಶಿಷ್ಟ್ಯಗಳಾಗಿವೆ.

ಕೃಷ್ಣ ಮತ್ತು ಗೋಪಿಯರು ಚಿತ್ರವು ಜೀವ–ಪರಮರ ಮಿಲನದ ಶಾಶ್ವತ ಹಂಬಲ ಸೂಚಿಸುವಂಥದು. ಕೃಷ್ಣ –ಪರಮ ಅಥವಾ ಪರಮಾತ್ಮ ಪ್ರತೀಕ. ಲೋಕದ ಜೀವಿಗಳೆಲ್ಲವೂ ಗೋಪಿರೂಪಿಗಳು. ಹಸುಗಳು ಪಶು ಸ್ವಭಾವದ ಜೀವಿಗಳು. ಪರಮನನ್ನು ಸೇರಲು ತವಕಿಸುವ ನಿರಂತರ ಹಂಬಲದ ಪ್ರತೀಕ. ಆದಿ–ಅಂತ್ಯವಿಲ್ಲದ ಪ್ರವಾಹ(ಯಮುನೆ) ಕೊಳಲ ನಿನಾದ ಜೀವಿಯನ್ನು ತನ್ನತ್ತ ಸೆಳೆವ ಗಾನ. ಅದೂ ನಿರಂತರ. ಈ ಚಿತ್ರದಲ್ಲಿ ದೇವರು ಮತ್ತು ಮಾನವ ಸಂಬಂಧಗಳನ್ನು ಕುರಿತ ಕಲ್ಪನೆ ಕಾಣುತ್ತೇವೆ. ಕೊಳಲನೂದುವ ಶ್ರೀಕೃಷ್ಣನ ಮುಖ, ತಲೆಯಲ್ಲಿ ಸಿಕ್ಕಿಸಿಕೊಂಡ ನವಿಲುಗರಿ ಜೀವವಾಹಿನಿಯಾಗಿ ಪ್ರವಹಿಸುತ್ತಿರುವ ನದಿ ಪ್ರೇಮದ ನಾದ ತರಂಗಿಣಿ, ಆಲಿಸಿ ಮುಖ ಮೇಲೆತ್ತಿ ನಿಂತ ಗೋವುಗಳು, ಎಲ್ಲ ಸಾಂಕೇತಿಕ.

ಕಲ್ಕಿ ಚಿತ್ರ ಹಿರೇಮಠರ ಇತರ ಚಿತ್ರಗಳಿಗಿಂತ ವೈದೃಶ್ಯದ ನೆಲೆಯಲ್ಲಿ ಚಿತ್ರಿತಗೊಂಡಿದ್ದು. ಸರ್ರಿಯಲಿಸ್ಟ್‌ರನ್ನು ನೆನಪಿಸುವ ಇದು ಧರ್ಮ, ಸಾಹಿತ್ಯ ಮತ್ತು ವಿಜ್ಞಾನಗಳ ಅಪಾರತೆ, ಅಸಂಗತಗಳನ್ನು ಪ್ರಕಟಿಸುತ್ತಿದೆ. ಕಲಿಯುಗದಲ್ಲಿ ಧರ್ಮ ಸಾಗುತ್ತಿರುವ ಜಾಡು, ವಿಜ್ಞಾನದ ಮುನ್ನಡೆಗಳನ್ನು ಸೂಚಿಸುವ ರಚನೆ ಇದು. ಕಲ್ಕಿ ಎಂಬ ಈ ಮಾನವ ದೇಹದಲ್ಲಿ ತರಾವರಿ ಸಂಕೇತಗಳು ವಿವಿಧ ಕ್ಷೇತ್ರಗಳ ಮುನ್ನಡೆಯನ್ನು ಪ್ರತಿನಿಧಿಸುತ್ತವೆ. ಸೂರ್ಯ, ಚಂದ್ರ, ಪರಮಾಣುವಿನ ಸಂಕೇತಗಳು, ವಿಜ್ಞಾನದ ಮುನ್ನಡೆ, ವಿಪರ್ಯಾಸಗಳನ್ನು, ಗೋವುಗಳು ಯುಗಯುಗಗಳಲ್ಲಿನ ಧಾರ್ಮಿಕ ನಡೆಯನ್ನು ಸೂಚಿಸಿದರೆ, ಲಂಗು ಲಗಾಮು ಇಲ್ಲದ ನೇರ ನೋಟದ ಕುದುರೆ ಕಲ್ಕಿಯ ವಾಹನ ಕಲಿಯುಗದ ವರ್ತನೆ ಸೂಚಿಸುತ್ತದೆ. ಮತ್ಸ್ಯ, ಹಾವು ಮತ್ತು ಅದರ ಮೊಟ್ಟೆಗಳು, ಸಿಂಹದ ನೆತ್ತಿಯ ಮೇಲೆ ನರಿ ಮುಂತಾದವು ಕಲಿಯುಗದ ವಿಪರೀತಗಳು ದೊಡ್ಡ ಮೀನು ಸಣ್ಣದನ್ನು, ಹಾವು ತನ್ನ ತತ್ತಿಯನ್ನು ತಾನೇ ಕಬಳಿಸುವುದು, ಅರ್ಹರ (ಸಿಂಹ) ಮೇಲೆ ಅನರ್ಹರು (ನರಿ) ಮೆಟ್ಟಿ ನಿಲ್ಲುವುದು



ಇತ್ಯಾದಿ ಆಕೃತಿಗಳನ್ನು ಒಂದು ನಿರ್ದಿಷ್ಟ ವಲಯದೊಳಗೆ ರಚಿಸುವ ಆಶಯ ಅವುಗಳಿಗೆ ಸಾಂಕೇತಿಕ ಸ್ಥಾನವನ್ನು ನೀಡುವುದಕ್ಕಾಗಿ. ಇಲ್ಲಿ ವರ್ಣ ಮೇಳ ಇತರ ಕಲಾಕೃತಿಗಳ ಮೇಳಕ್ಕಿಂತ ತೀರ ವೈದೃಶ್ಯದಿಂದ ಕೂಡಿದೆ. ಅನುಭವೀ ವರ್ಣಗಳ ಸಾಂಗತ್ಯದಿಂದ ಒಂದು ಬಗೆಯ ನವಿರಾದ ವರ್ಣ ಮಿಶ್ರಣದಿಂದ ಕೃತಿ ಅಪ್ಯಾಯಮಾನವಾಗಿದೆ. ಸಂಯೋಜನೆಯಲ್ಲೂ ವೈಶಿಷ್ಟ್ಯತೆ ಇದೆ. ಕಲಿಯುಗದ ವಿಪರೀತಗಳನ್ನು ಸಮರ್ಥವಾಗಿ ಈ ಕೃತಿ ಪ್ರತಿನಿಧಿಸುತ್ತದೆ.

ಅಭಿಸಾರಿಕಾ ಸ್ತ್ರೀ ಪ್ರಧಾನ ಚಿತ್ರ. ಭಾರತೀಯ ಕಾವ್ಯ ಮತ್ತು ನಾಟಕಗಳಲ್ಲಿ ಆರು ಪ್ರಕಾರದ ನಾಯಿಕೆಯರ ಪಾತ್ರಗಳಿವೆ. ಅವರಲ್ಲಿ ಅಭಿಸಾರಿಕೆಯೂ ಒಬ್ಬಳು. ಅಭಿಸಾರಿಕೆ ವಾಸ್ತವವಾಗಿ ರೂಪವತಿ. ಆ ರೂಪವನ್ನು ಆಧುನಿಕವಾಗಿ ತೋರಿಸುವ ಬಗೆ ಹೇಗಿರಬೇಕು ಎಂಬುದಕ್ಕೆ ಈ ಚಿತ್ರ ಒಂದು ಉತ್ತಮ ನಿದರ್ಶನ. ನೀಳ ದೇಹಾಕೃತಿಯನ್ನು ಹೊಂದಿರುವ, ಜನಪದರ ಚೆಲುವಿನ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವ ಈಕೆ ನಿರೀಕ್ಷೆಯಲ್ಲಿ ತಲ್ಲೀನ. ಮಿಲನದ ಭಾವಸ್ಫುರಿಸುತ್ತಿರುವ ಈ ಆಕೃತಿಯ ಅಂಗಾಂಗಳೆಲ್ಲವೂ ನೇರ, ನೀಳ. ಅತ್ಯಂತ ಪ್ರಾಥಮಿಕವೆನಿಸುವ ವರ್ಣಸಂಯೋಜನೆಗೆ ಪೂರಕವಾಗಿರುವ, ಸಂಯೋಜನೆಯ ವಿನ್ಯಾಸವಿದೆ. ಚಿತ್ರದುದ್ದಕ್ಕೂ ಹರಡಿರುವ ಬಾಳೆ ಎಲೆ ವಿರಹದ ಉರಿಯನ್ನು ತಣಿಸುವ ಸಾಧನ. ಅಭಿಸಾರಿಕೆ ಹಿನ್ನೆಲೆಯಲ್ಲಿ ಪ್ರಶಾಂತವಾದ, ಏಕಾಂತದ ದಟ್ಟ ಕಾನನ, ಆಕೆಯ ಅಂತರಂಗದ ಭಯ ಮಗ್ಗಲಿನ ಕರಿಯ ತತ್ತಿಯಾಕಾರದಲ್ಲಿ ಸೂಚಿತ ರೇಖಾತ್ಮಕ ರಚನೆಗಳು ಮತ್ತು ಏಕ ಲೇಪನದ ವರ್ಣಗಾರಿಕೆ. ಇವು ಚಿತ್ರದ ಭಾವತೀವ್ರತೆಯ ಒಟ್ಟಂದಕ್ಕೆ ಪೂರಕವಾದ ಅಂಶಗಳು.

ಮಡಿಕೇರಿಗೆ ವಿದಾಯ ಕಲ್ಕಿ ಚಿತ್ರದ ವರ್ಣ ತಂತ್ರಗಾರಿಕೆಯನ್ನೇ ಪುನರಾವರ್ತಿಸುವ ಈ ಚಿತ್ರದ ಎಲ್ಲ ಆಕೃತಿಗಳು ಆಧುನಿಕ ತುಡಿತಕ್ಕೊಳಪಟ್ಟಿವೆ. ಮಡಿಕೇರಿಯ ನಿಸರ್ಗ ಸೌಂದರ್ಯಕ್ಕೆ ಮಾರು ಹೋದ ಕಲಾವಿದನ ಸ್ವಚ್ಛಂದ ಮನಸು ಹರಿದಾಡುವ ಪ್ರತೀಕವಾಗಿ ಮೇಲ್ಭಾಗದಲ್ಲಿ ಕಲಾವಿದ, ಅವನ ರೂಪಕ್ಕೆ ರೆಕ್ಕೆಗಳನ್ನು ಸಂಯೋಜಿಸಲಾಗಿದೆ. ಗಿರಿಕಂದರಗಳ ಮೇಲೆ ಮಡಿಕೇರಿಯ ಸಾಂಪ್ರದಾಯಿಕ ಹಂಚಿನ ಮನೆಗಳ ಮೇಲೆ, ವಿಹರಿಸುವ ಇಲ್ಲಿನ ಆಕೃತಿಗಳಲ್ಲಿ ಸರ್ರಿಯಲಿಸ್ಟಿಕ್ ತಂತ್ರಗಾರಿಕೆ ಇದೆ. ಮೂರ್‍ನಾಲ್ಕು ವರ್ಣಗಳಲ್ಲಿಯೇ ಇಡೀ ಮಡಿಕೇರಿಯ ಪರಿಸರವನ್ನು ಅನಾವರಣಗೊಳಿಸುವ ಬಗೆ ಅನೂಹ್ಯವಾದುದು. ಇಂತಹ ಅಭಿವ್ಯಕ್ತಿಯ ಸಂದರ್ಭದಲ್ಲಿ ಆ ಪರಿಸರದ ಎಲ್ಲ ಅಂಶಗಳನ್ನು, ಔದಾರ್ಯವನ್ನು ಸಾಂಕೇತಿಕವಾಗಿ ತೋರ್ಪಡಿಸುವುದಕ್ಕೆ ಈ ಚಿತ್ರ ಒಂದು ಉತ್ತಮ ನಿದರ್ಶನ.



ವಿಶ್ವರೂಪ ದರ್ಶನ ಎಂದ ಕೂಡಲೇ ನಮ್ಮ ಕಣ್ಣೆದುರು ಸುಳಿಯುವುದು ಮಹಾಭಾರತ ಯುದ್ಧ, ಬಂಧು ಬಾಂಧವರ ಹತ್ಯೆಗೆ ನೊಂದು ಶಸ್ತ್ರಗಳನ್ನು ಚೆಲ್ಲಿ ಅಧೀರನಾಗಿ ನಿಂತ

ನಿರ್ವಿಣ್ಣ ಅರ್ಜುನ, ಗೀತೋಪದೇಶ ಮಾಡುವ ಶ್ರೀಕೃಷ್ಣ ಇದೊಂದು ಯುದ್ಧ ಸಂದರ್ಭದ ಲೌಕಿಕ ಘಟನೆ. ಆದರೆ ಇದೊಂದು ನಿತ್ಯದ, ನಿರಂತರದ ಘಟನೆ. ಸಾವು-ಬದುಕುಗಳ ವ್ಯಾಖ್ಯಾನ. ಸಾವು-ಬದುಕು ಲೌಕಿಕವನ್ನು ಮೀರಿದ ವ್ಯವಹಾರ. ಅಂತೆಯೇ ಈ ಚಿತ್ರದಲ್ಲಿ ಅರ್ಜುನ ಕೃಷ್ಣ ಮಾನವ ರೂಪವಾಗಿ ಚಿತ್ರಿತವಾಗಿಲ್ಲ. ಮಾನವಾಕೃತಿ ಮೀರಿದ ಪ್ರಚಂಡ ಶಕ್ತಿ ರೂಪಿಗಳು, ನಡೆದುದು ಬದುಕಿನ ವ್ಯಾಖ್ಯಾನ. ಸಾವಿರಾರು ಕೈಗಳಿಂದ, ಸಾವಿರಾರು ಮುಖಗಳಿಂದ ಲೋಕ ಸಮಸ್ತವನ್ನು ಒಳಗೊಳ್ಳುವ ವಿರಾಟ್ ವಿಶ್ವರೂಪ ತೋರಿಸಿದ ನೈಜಾತೀತ ರೂಪದ ಚಿತ್ರ, ಅದನ್ನು ಡಾ.ಬಿ.ಕೆ.ಹಿರೇಮಠ ಅವರು ಚಿತ್ರಿಸುವ ರೀತಿ ಭಿನ್ನ. ಓಂಕಾರ ಪ್ರಣವ ವಿಶ್ವರೂಪ. ವಿಶ್ವದ ಪ್ರತಿಯೊಂದು ಧರ್ಮವು ಪ್ರಣವವನ್ನೇ ತೋರಿಸುತ್ತವೆ. ಅದೇ ಅಂತಿಮ, ಅನಂತ, ಅಪ್ರತಿಮ ಶಕ್ತಿ. ಎಂಬ ಅಭಿವ್ಯಕ್ತಿಯೇ ಈ ಕಲಾಕೃತಿಯ ಸಾರ ಸರ್ವಸ್ವವಾಗಿದೆ. ಶಸ್ತ್ರಗಳು, ಬಾಣ-ಬತ್ತಳಿಕೆಗಳು, ಎಲ್ಲವನ್ನೂ ಆವರಿಸಿ ನಿಲ್ಲುವ ಹೆಜ್ಜೆಯ ಗುರುತುಗಳು, ನೂರಾರು ಆಯುಧ ಧರಿಸಿದ ಹಸ್ತ ಮುಂತಾದವುಗಳನ್ನು ಸಾಂಕೇತಿಕ. ವಿಶ್ವದಲ್ಲಿ, ಮನುಷ್ಯರಲ್ಲಿ ವ್ಯಕ್ತವಾಗುವ ಕ್ರೌರ್ಯ, ದಯೆ, ಪ್ರೇಮ, ಬಂಧುತ್ವ, ವೈರಗಳೆಲ್ಲವೂ ನಮ್ಮವೆಂದರೂ ನಮ್ಮವಲ್ಲ. ಅವೆಲ್ಲವೂ ವಿಶ್ವಕ್ರಿಯೆ ಎಂಬುದನ್ನು ಅಭಿವ್ಯಕ್ತಿಸಲು ಈ ಕಲಾಕೃತಿಯಲ್ಲಿ ಯತ್ನಿಸಲಾಗಿದೆ. ಈ ಕಲಾಕೃತಿಯ ಮೌಲ್ಯವನ್ನು ನೋಡಿಯೇ ಕಂಡುಕೊಳ್ಳಬೇಕು.

ವಸಂತ ಶೀರ್ಷಿಕೆಯ ಈ ಕೃತಿ ಕ್ಯೂಬಿಸ್ಟ್ ಶೈಲಿಯ ಸಂಭ್ರಮಾತ್ಮಕ ಕಲಾಕೃತಿ. ತಾರುಣ್ಯ, ತಾರುಣ್ಯದ ಆಕರ್ಷಣೆ, ತಾರುಣ್ಯದ ತಾತ್ಕಾಲಿಕತೆಯನ್ನು ಚಿತ್ರಿಸುವುವಂಥದು. ಅದರಲ್ಲೂ ತರುಣಿ ಅಲಂಕಾರ ಪ್ರಿಯೆ. ದರ್ಪಣ ತನ್ನ ಸೌಂದರ್ಯವನ್ನು ಇಮ್ಮಡಿಗೊಳಿಸಿಕೊಳ್ಳುವ ಸಾಧನ. ಪ್ರಮದೆ ತನ್ನ ಸುತ್ತಲು ಅಲಂಕಾರದ ಸಾಮಗ್ರಿಗಳನ್ನು ಹೊಂದಿದ್ದಾಳೆ. ವಸ್ತ್ರವನ್ನು ಹಸಿರು ವರ್ಣದಿಂದ ಹಾಗು ಮೈಚೆಲುವನ್ನು ತೆಳು ಕೆಂಪುವರ್ಣದಿಂದ ಚಿತ್ರಿಸಿದ್ದಾರೆ. ಸಂಯೋಜನೆಯ ದೃಷ್ಟಿಯಿಂದ ಉತ್ತಮ ನೆಲೆಯ ಈ ಕೃತಿಯಲ್ಲಿ ಬಣ್ಣಗಳನ್ನು ಬ್ಲೇಡಿನಿಂದ ಲೇಪಿಸಿದ್ದು, ಒರಟುವಿಕೆ ಇದೆ. ರೂಪವನ್ನು ಸ್ಪಷ್ಟವಾಗಿ ನಿರೂಪಿಸಲು ಕಪ್ಪುವರ್ಣದ ರೇಖೆಯನ್ನು ಬಳಸಿರುವ ರೀತಿಯಿಂದಾಗಿ ಈ ಕೃತಿ ಸಾಮಾನ್ಯ ನೋಡುಗನಿಗೂ ಅಪ್ಯಾಯಮಾನವೆನಿಸುತ್ತದೆ. ಈ ಕಲಾಕೃತಿಯ ವಸ್ತು ಸಾಮಾನ್ಯವಾಗಿದ್ದರೂ ಚಿತ್ರಣ ಶೈಲಿ ರಮ್ಯವಾಗಿದೆ. ಷೋಡಶಿಯೊಬ್ಬಳು ತನ್ನ ಎಡದ ಕೈಯಲ್ಲಿ ಕನ್ನಡಿಯನ್ನು ಹಿಡಿದು ತನ್ನ ಸೌಂದರ್ಯಕ್ಕೆ ತಾನೇ ಮರುಳಾಗಿ. ತುಂಬಿದದೆಗಳು ಅನ್ಯರಿಗೆ ಕಂಡಾವು ಎಂಬ ಕಲ್ಪನೆಯೂ ಇಲ್ಲದೆ ಹಣೆಗೆ ತಿಲಕವನ್ನು ಧರಿಸುತ್ತಿದ್ದಾಳೆ. ಎದುರಿನಲ್ಲಿ ಅದೇ ಪೂರ್ಣ ಅರಳಿ ನಳನಳಿಸುವ ಎರಡು ಹೂಗಳು ನೋಡುಗನಿಗೆ ಅಭಿಮುಖವಾಗಿವೆ. ಚಿತ್ರದಲ್ಲಿ ಬಳಸಿದ ಹಸಿರು, ಕೇಸರಿ ವರ್ಣಗಳು ವಸಂತದ, ರಸಿಕತೆಯ ಸಮೃದ್ಧಿಯನ್ನು ತೋರುವ ಸಂಕೇತಗಳಾಗಿವೆ. ಬಿ.ಕೆ.ಹಿರೇಮಠ ಅವರ ಅಭಿವ್ಯಕ್ತಿಸುವ ಶೈಲಿ ಅಭಿವ್ಯಕ್ತ ಈ ಕಲಾಕೃತಿ ವಿಶಿಷ್ಟ ಬಗೆಯದು.



ಭಕ್ತ ಈ ಚಿತ್ರ ಕೃತಿ ವೈರುಧ್ಯಮಯ ವರ್ಣಗಳನ್ನು ರೂಪಗಳನ್ನು ಬಳಸಿಕೊಂಡ ದ್ವಿಮಾನ ಶೈಲಿಯದು. ಸಾಮಾನ್ಯವಾಗಿ ತ್ರಿಮಾನ ಅನುಭವ ನೀಡುವ ಕೃತಿಗಳನ್ನು ಕಲಾವಿದರು ರಚಿಸುತ್ತಿದ್ದರೂ ಹಿರೇಮಠರು ಮಾತ್ರ ತಮ್ಮ ಕೃತಿಗಳಲ್ಲಿ ಬಹುತೇಕ ದ್ವಿಮಾನ ರೂಪಗಳನ್ನೇ ಹೆಣೆಯುತ್ತಾರೆ. ಇದು ಶುದ್ಧ ಭಾರತೀಯ ಚಿತ್ರಗಳ ಪ್ರಭಾವ. ಭಕ್ತಿಯ ಲಕ್ಷಣಗಳನ್ನು ತೋರಿಸುವ ಈ ಕೃತಿ ಆಧ್ಯಾತ್ಮಿಕ ಸ್ವರೂಪದ್ದು. ಹೂವುಗಳನ್ನು ಸಮರ್ಪಿಸುವ ನೇರ ರೇಖೆಗಳ ಮುಖಾಂತರ ವ್ಯಕ್ತಪಡಿಸಿದ್ದಾರೆ. ಹಿನ್ನೆಲೆಯಲ್ಲಿ ನೀಲಿವರ್ಣ ಪ್ರಧಾನ. ಮುಖದ ಹಣೆಯ ಭಾಗದಲ್ಲಿ ಜ್ವಾಲೆಯನ್ನು ರಚಿಸಲಾಗಿದೆ. ಅದು ಜ್ಞಾನಾಗ್ನಿ ಸಂಕೇತ ಮುಖವನ್ನು ಮಧ್ಯವಾಗಿಸಿಕೊಂಡು ಹಸ್ತಗಳನ್ನು ಎರಡೂ ಬದಿಯಲ್ಲಿ ಹಸ್ತಗಳನ್ನು ಚಿತ್ರಿಸಿ, ಮಧ್ಯೆ ಒಂದು ತೆರೆದಿರುವ ಕಣ್ಣನ್ನು ರಚಿಸಿದ್ದಾರೆ. ಇದು ತೆರೆದ ಅಂತರಂಗದ ಕಣ್ಣಿನ ಪ್ರತೀಕ. ಅರ್ಪಣಾ ಭಾವವೇ ಭಕ್ತಿಯ, ಭಕ್ತನ ಸರ್ವಸ್ವ ಎಂಬುದು ಧ್ವನಿತ.

ಪ್ರಕೃತಿ ಮತ್ತು ಪುರುಷ ಪ್ರಕೃತಿಯ ಅವಿಭಾಜ್ಯ ಭಾಗಗಳಾದ ಪ್ರಕೃತಿ-ಪುರುಷ. ರೂಪಾಕೃತಿಗಳು ಗೋಳಾಕಾರದ ಒಳ ಆವರಣದಲ್ಲಿ ಸಾಂಕೇತಿಕವಾಗಿ ಚಿತ್ರಿತವಾಗಿವೆ. ಸರ್ವ ಶಕ್ತ ಪುರುಷ-ಒಂದೇ ಅಖಂಡ ಶಕ್ತಿ. ಒಂದೇ ಎರಡಾಗಿ ಸೃಷ್ಟಿಗೆ ಕಾರಣವಾಗುತ್ತದೆ. ಮೊಳೆತ ಮೇಲೆ ಚಿಮ್ಮಿದ ಸಸಿಯ ಮಗ್ಗಲಿನ ಕೆಂಪು-ಬಿಳಿ ಎಸಳುಗಳು ಪ್ರಕೃತಿ-ಪುರುಷ ಸಂಕೇತ ಭ್ರೂಣದಲ್ಲಿನ ಶಿಶುರೂಪ ಸೃಷ್ಟಿ ಸಂಕೇತ. ನೀಲಿ ಅನಂತ-ಗೋಳದ ಸುತ್ತಲಿನ ಬಿಳಿ-ಕೆಂಪು ಆವರಣದಲ್ಲಿ ಸಾಂಕೇತಿಕವಾಗಿ ಪ್ರಕೃತಿ-ಪುರುಷ. ಮನುಷ್ಯ ರೂಪವನ್ನು ತೋರಿಸುತ್ತ ಬ್ರಹ್ಮಾಂಡದ ಕಲ್ಪನೆ ಕೊಡುತ್ತವೆ. ಇದು ಹಿರೇಮಠರ ಚಿಂತನೆಯ ಸಾಂಕೇತಿಕ ಕಲಾಕೃತಿ.

ತಾಯಿ-ಮಗು ಪೂರ್ವ-ಪಶ್ಚಿಮದ ಬಹುತೇಕ ಕಲಾವಿದರು ತಾಯಿ ಮಗುವಿನ ಕುರಿತ ಚಿತ್ರ, ಶಿಲ್ಪಗಳನ್ನು ರಚಿಸಿದಂತೆ ಹಿರೇಮಠರು ಕೂಡ ತಾಯಿ-ಮಗುವಿನ ಕಲಾಕೃತಿಯೊಂದನ್ನು ರಚಿಸಿದ್ದಾರೆ. ಬಹುತೇಕ ತಾಯಿ ಮಗುವಿನ ಕಲಾಕೃತಿಗಳಲ್ಲಿರುವ ಭಾವಗಳಿಗಿಂತ ಇಲ್ಲಿನ ಭಾವ ತೀರ ವಿಭಿನ್ನ. ಭಾವಪೂರ್ಣವಾದ ನೋಟ ತಾಯಿ ಮಗುವನ್ನು ಎತ್ತಿಕೊಂಡಿರುವ ಶೈಲಿ ನೈಜ ದೈಹಿಕ ಸ್ಥಿತಿಗಿಂತ ವಿಭಿನ್ನ. "ಕಲಾವಿದ ತನ್ನ ರೇಖೆಗಳ ಮುಖಾಂತರ ಜೀವಂತವಾಗಿರುತ್ತಾನೆ" ಎಂಬುದಕ್ಕೆ ಹಿರೇಮಠರ ಈ ತಾಯಿ ಮತ್ತು ಮಗು ಕಲಾಕೃತಿ ಸಾಕ್ಷಿಯಾಗಿ ನಿಲ್ಲುತ್ತದೆ. ತಾಯಿಯ ಭಾವ ಒಂದು ಬಗೆಯ ನಿಗೂಢ, ಮಗುವಿನ ಭಾವ ಮುಗ್ಧ. ಇಲ್ಲಿ ದಟ್ಟವಾದ ರೇಖೆಗಳು ಮನುಷ್ಯ ಭಾವನೆಗಳಿಗೆ ಇಂಬುಕೊಡುವಂತೆ ಚಿತ್ರಿಸಲಾಗಿದೆ.




ಮಗುವನ್ನಗಲಿದ ತಾಯಿ ಚಿತ್ರ ಭಾವಪ್ರಚೋದಕ. ಮಗವನ್ನು ಕಳೆದುಕೊಂಡ ತಾಯಿ ಅವಳಿಗೆ ಮುಖ್ಯವಾಗಿ ಕಾಡುವ ನೆನಪು, ಆ ಮಗುವಿನ ಬಾಲ್ಯದ ಸಾಹಚರ್ಯಗಳು.

ಅದಕ್ಕೆ ಪೂರಕವಾದ ಮಕ್ಕಳ ಆಟಿಕೆಗಳು ಇಲ್ಲಿ ರೂಪತಳೆದಿವೆ. ವಾಸ್ತವವಾಗಿ ನೋಟಕರಿಗೆ ತಾಯಿಯ ರೂಪ ಮಾತ್ರವೇ ಇಲ್ಲಿ ಕಾಣುತ್ತದೆ. ಮಗು ಎಲ್ಲಿ ? ಎಂಬ ಪ್ರಶ್ನೆ ಉದ್ಭವಿಸಬಹುದು. ಅದು ಇಲ್ಲಿ ಸಾಂಕೇತಿಕವಾಗಿ ತೊಟ್ಟಿಲು ರೂಪದಲ್ಲಿ ಕಾಣಬಹುದಾಗಿದೆ. ಚಿಂತಾಕ್ರಾಂತ ಸ್ಥಿತಿಯಲ್ಲಿ ರಚನೆಗೊಂಡಿರುವ ತಾಯಿಯ ರೂಪ ಜೀವವೊಂದನ್ನು ಕಳೆದುಕೊಂಡ ಭಾವವನ್ನು ಅಪ್ಯಾಯಮಾನವಾಗಿ ಸ್ಫುರಿಸುತ್ತಿದೆ. ಕೇವಲ ಕಂದುಹಳದೀ ವರ್ಣವೊಂದನ್ನೇ ತರತಮವಾಗಿ ದುಡಿಸಿಕೊಂಡು ಮೆರೆದ ಕುಂಚದ ತಂತ್ರಗಾರಿಕೆ ಇಲ್ಲಿದೆ. ಮೂಲೆಯಿಂದ ಮೂಲೆಯವರೆಗೆ ಸಂಯೋಜನೆಗೊಳಿಸುವ, ಆಕೃತಿಗಳು ಚಿತ್ರದ ಪ್ರಮುಖ ಆಶಯವನ್ನು ನೇತ್ರಗಳಲ್ಲೇ ನೋಡುಗನಿಗೆ ಅಭಿವ್ಯಂಜಿಸುವ ಪರಿ ಅನೂಹ್ಯವಾದುದು.

ದುರ್ಗಾ ಚಿತ್ರದಲ್ಲಿ ಮಗುವನ್ನಗಲಿದ ತಾಯಿಯ ವರ್ಣ ಸಂಯೋಜನೆಗಿಂತ ಭಿನ್ನವಾದ ಈ ಚಿತ್ರ ಪ್ರಮುಖ ಆಶಯಕ್ಕೆ ಪೂರಕವಾಗಿ ಪ್ರಖರ ವರ್ಣಗಳ ಸ್ಪರ್ಶ ಹೊಂದಿದೆ. ಅವು ಬಹುತೇಕವಾಗಿ ಸಂಕೇತಗಳಲ್ಲಿಯೇ ಲೇಪನಗೊಂಡು ಚಿತ್ರದ ಆಶಯಕ್ಕೆ ನೆಲೆ ಒದಗಿಸುತ್ತವೆ. ದುರ್ಗೆಯ ಪೂರ್ಣ ಪ್ರಮಾಣದ ಆಕೃತಿ ಇಲ್ಲಿ ಇಲ್ಲವಾದರೂ, ಸಾಂಕೇತಿಕವಾಗಿ ದುರ್ಗೆಯ ಮುಖವೇ ಪ್ರಧಾನ ರೂಪವಾಗಿದೆ. ಒಂದೆಡೆ ವರದ ಅಭಯ ಹಸ್ತಗಳನ್ನು ಜೊತೆಗೆ ಶುಭ ಸೂಚಕವಾದ ಕಲಶವನ್ನು ತೋರ್ಪಡಿಸಲಾಗಿದೆ. ಹಾಗೂ ದುರ್ಗೆಯ ಉಗ್ರಸ್ವರೂಪವನ್ನು ಪ್ರತಿನಿಧಿಸುವ ತ್ರಿಶೂಲ, ಚಕ್ರ, ಕೊಡಲಿ ಮುಂತಾದ ಆಯುಧಗಳನ್ನು ಒಂದರ ಮೇಲೊಂದರಂತೆ ಸಂಯೋಜಿಸಲಾಗಿದೆ. ಎಂದಿನಂತೆ ಹಿರೇಮಠರು, ಅವರ ಅಪ್ಯಾಯಮಾನವಾದ ಕೆಂಪು ಹಳದಿವರ್ಣವನ್ನೇ ಪ್ರಮುಖವಾಗಿ ದುಡಿಸಿಕೊಂಡಿದ್ದರೂ ಅಲ್ಲಲ್ಲಿ ಚಿತ್ರದ ಆಶಯಕ್ಕೆ ಪೂರಕವಾದ ವರ್ಣಗಳ ಸ್ಪರ್ಶ ಕೃತಿಯ ಒಟ್ಟಂದದ ಪರಿಣಾಮವನ್ನು ಹೆಚ್ಚಿಸುತ್ತದೆ.


ಸೆರೆ ಚಿತ್ರ ಹಿರೇಮಠರ ವರ್ಣ ಹಾಗೂ ರೂಪಿಕೆಗಳ ಸಂಕ್ಷಿಪ್ತತೆಗೆ ನಿದರ್ಶನವಾಗಿ ಅವರ ಕಲಾಪ್ರೌಢಿಮೆಗೆ ಸಾಕ್ಷಿಯಾಗಿವೆ. ಕಲಾಶೈಲಿಯೂ ಕೂಡ ಅದೇ ಎನಿಸಿದರೂ ವಿಭಿನ್ನ. ವೈರುಧ್ಯಮಯ ವರ್ಣಗಳಿಂದ ಮೆರೆಯುವ ಈ ಚಿತ್ರಗಳಲ್ಲಿ ರೂಪಗಳಿಗೂ ಹಿನ್ನೆಲೆಯ ಅವಕಾಶಕ್ಕೂ ಸಾಕಷ್ಟು ದೂರವನ್ನು, ಹಿನ್ನೆಲೆಯ ವರ್ಣಕ್ಕೂ, ರೂಪಗಳ ವರ್ಣಕ್ಕೂ ವಿರೋಧಿ ವಾತಾವರಣವನ್ನು ಸೃಷ್ಟಿಸಿ ನೋಡುಗರಿಗೆ ಸ್ಪಷ್ಟ ಅನುಭವವನ್ನು ನೀಡುವಲ್ಲಿ ಈ ಕೃತಿ ಯಶಸ್ವಿಯಾಗುತ್ತದೆ. ಚಿತ್ರದ ಶೀರ್ಷಿಕೆಯ ಭಾವವು, ಅಳ ಕೊತ್ತಳದ ಕಪ್ಪು ವರ್ಣದ ಹಿನ್ನೆಲೆಯಲ್ಲಿ ಬಂಧನದಲ್ಲಿರುವ ನೀಲಿಬೂದು ವರ್ಣದಲ್ಲಿ ವ್ಯಕ್ತಿಯ ಮುಖ ಚಿತ್ರಿಸಲಾಗಿದೆ.ಪರಿಶುದ್ಧತೆಯ ಸಂಕೇತವಾದ ಶ್ವೇತವರ್ಣವನ್ನು ಹೊರಮೈ ಆವರಣದಲ್ಲಿ ಬಳಸಿಕೊಂಡು ನೋಡುಗನ ದೃಷ್ಟಿಯು ಮಧ್ಯಭಾಗದಲ್ಲಿ ಕೇಂದ್ರೀಕೃತವಾಗುವಂತೆ ರಚಿಸಲಾಗಿದೆ. ದೋಷಿ ಅಥವಾ ಅಪರಾಧಿಯನ್ನು ಶಾಶ್ವತವಾಗಿ ಬಂಧಿಸಲು ಪರಿಶುದ್ಧತೆಯೊಂದೇ ಸಾಕು ಎಂಬುದು ಈ ಚಿತ್ರದ ಸಂದೇಶ.

ಮೇಲಣ ಆಕಾಶ, ಕೆಳಗಣ ಭೂಮಿ ಚಿತ್ರವು ಮಾನವನ ಹೃದಯಹೀನತೆಯನ್ನು ಪ್ರಕಟಪಡಿಸುವುದಾಗಿದೆ. ದಟ್ಟವಾದ ಕಪ್ಪುವರ್ಣದ ರೇಖೆಗಳಿಂದ ಚಿತ್ರಿತವಾದ ಒಂದು



ಸರಳ ಕೃತಿ. ಕಂದು ಹಳದಿವರ್ಣವನ್ನು ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ. ಒಂದೇ ಚಿತ್ರದಲ್ಲಿ ಹಗಲು ಮತ್ತು ಕತ್ತಲೆಯನ್ನು ಒಟ್ಟಿಗೆ ತೋರಿಸಲಾಗಿದೆ. ಚಿತ್ರದ ಎಡ ಭಾಗದಲ್ಲಿ ಕಟ್ಟಡಗಳ ಸಮುಚ್ಚಯವು ಕಪ್ಪುವರ್ಣದಿಂದ ಚಿತ್ರೀಕರಿಸಲಾಗಿದ್ದು ಕಿಟಕಿಗಳಲ್ಲಿ ಮಾತ್ರ ಸುವರ್ಣ ವರ್ಣ ಹೊರಸೂಸಿದೆ. ಇದು ಉಳ್ಳವರ ಜೀವನದ ಪ್ರತೀಕ. ಬಲಭಾಗದಲ್ಲಿ ಪ್ರಖರ ಸೂರ್ಯನನ್ನು, ನಗ್ನವ್ಯಕ್ತಿಯನ್ನು ದಯಾಪೂರ್ಣ ದೃಷ್ಟಿಯಿಂದ ಬೇಡಲು ಚಾಚಿರುವಂತೆ ಚಿತ್ರಿಸಲಾಗಿದೆ. ಕಲಾವಿದರು ಕೆಂಪು ವರ್ಣವನ್ನು ಪಾರದರ್ಶಕವಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ಹೃದಯಹೀನರ ಮಧ್ಯ ಅನಾಥ ಭಿಕ್ಷುಕನಿಗೆ ಉಳಿಯುವುದು ಮಾತ್ರ ಮೇಲೆ ಆಕಾಶ, ಕೆಳಗೆ ಭೂಮಿ ಎಂಬುದನ್ನು ಪರಿಣಾಮಕಾರಿಯಾಗಿ ಮೂಡಿಸುವ ಚಿತ್ರರಚನೆ ಇದಾಗಿದೆ.

ಕಾನನದಾಳದ ಸಂಗೀತ ಈ ಚಿತ್ರವು ಮಡಿಕೇರಿಯ ಸುಂದರ ಕಾನನ ಮೌನದಿಂದಲೇ ಪ್ರೇರಿತವಾದುದು. ಆಕಾಶದ ಪೂರ್ಣಚಂದಿರ ಹುಣ್ಣಿಮೆಯ ರಾತ್ರಿಯ ಭಾವನೆಯನ್ನು ಈ ಚಿತ್ರವು ನೋಡುಗರಿಗೆ ಕಟ್ಟಿಕೊಡುತ್ತದೆ. ವೃಕ್ಷಗಳ ಸಮೂಹ ದಟ್ಟ ಕಾನನದ ಭಾವನೆಯನ್ನು ಬಿಂಬಿಸುತ್ತವೆ. ಹಾಗೆಯೇ, ಪ್ರಕೃತಿಯ ಸಂಗೀತವು ಭಾವದಾಳಕ್ಕೆ ಇಳಿದಾಗ ಕೇಳಿಸುವಂಥವು. ಹಿತವಾದ ಅನುಭವ ನೀಡುವ ಚಂದ್ರನಲ್ಲಿ ಸಂಗೀತ ವಾದ್ಯಗಳು ಮೇಳೈಸಿರುವುದು ಕಲಾಕೃತಿಯ ಉದ್ದೇಶವನ್ನು ವ್ಯಕ್ತವಾಗಿಸುತ್ತದೆ. ಸಮುದ್ರ ನೀಲಿ ಹಾಗೂ ಹಸಿರು ವರ್ಣಗಳನ್ನು ಬಳಸಿಕೊಂಡು ಈ ಚಿತ್ರವನ್ನು ರಚಿಸಲಾಗಿದೆ. "ಪ್ರಕೃತಿ ರಹಸ್ಯಗಳ ಆಗರ" ಎನ್ನುವದನ್ನು ಈ ಚಿತ್ರವು ಸಮರ್ಥವಾಗಿ ಬಿಂಬಿಸುತ್ತದೆ. ಕೆ.ಎಸ್.ನರಸಿಂಹಸ್ವಾಮಿಯವರ ಕವಿತೆಗಳಂತೆ ಈ ಚಿತ್ರವು ಒಂದು ನವಿರಾದ ಕಾವ್ಯಮಯವಾದ ಭಾವನೆಯನ್ನು ಕೆರಳಿಸುತ್ತದೆ. ಒಟ್ಟಾರೆಯಾಗಿ ಈ ಚಿತ್ರವು ಒಂದು ಸುಂದರ ಭಾವಗೀತೆಯ ರಾಗವನ್ನು ಕಟ್ಟಿಕೊಡುತ್ತದೆ.



ನನ್ನ ಸಂಸ್ಕೃತಿ ಶೀರ್ಷಿಕೆಯ ಕೃತಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಹಲವಾರು ಸಂಕೇತಗಳನ್ನು ರೂಪಗಳನ್ನಾಗಿ ಚಿತ್ರಿಸಲಾಗಿದೆ. ಸಂಸ್ಕೃತಿಯ ಸಮೃದ್ಧಿಯ ಸಂಕೇತಗಳನ್ನು ತೋರ್ಪಡಿಸುತ್ತಾ ಸಂಸ್ಕೃತಿಯ ಒಂದು ಭಾಗವಾಗಿರುವ ಆಧ್ಯಾತ್ಮಿಕ ಪರಂಪರೆಯನ್ನು ದೃಶ್ಯದಲ್ಲಿ ನವ್ಯ ಸಂದರ್ಭಕ್ಕೆ ತಕ್ಕಹಾಗೆ ಅಭಿವ್ಯಕ್ತಿಸುವುದಕ್ಕೆ ಬಳಸಿಕೊಳ್ಳುವಲ್ಲಿ ಹಿರೇಮಠರು ಕ್ರಿಯಾಶೀಲರಾಗುತ್ತಾರೆ. ಅವರ ಕೃತಿಗಳಲ್ಲಿ ಬಹುಭಾಗ ಆಕ್ರಮಿಸಿಕೊಂಡಿರುವ ನೀಲವರ್ಣ ಅನಂತದ ಪ್ರತೀಕವಾಗುತ್ತದೆ. "ನನ್ನ ಸಂಸ್ಕೃತಿ"ಯಂಥ ಕಲಾಕೃತಿಗಳಲ್ಲಿ ಮೇಳೈಸುವ ರೂಪಗಳನ್ನು ನೋಡುಗರ ಹತ್ತಿರಕ್ಕೆ ತರುವುದು ಇಲ್ಲಿ ಕಂಡುಬರುವ ಪ್ರಮುಖ ಅಂಶವೂ ಹೌದು. ವಿವಿಧತೆಯಲ್ಲಿ ಏಕತೆಯನ್ನು ಸಾರುವ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವಂತಹ ಈ ಕೃತಿಯು ಕಲಾವಿದನ ಮನೋಭಾವಕ್ಕೆ ತಕ್ಕಂತೆ ಒಡಮೂಡಿದೆ. ವಿಭಿನ್ನ ವರ್ಣಗಳನ್ನು ಸಂಯೋಜಿಸಿಕೊಂಡು ಭಾರತೀಯ ಸಂಸ್ಕೃತಿಯ ವೈವಿಧ್ಯತೆ . ವರ್ಣಮಯತೆ, ಸಮೃದ್ಧತೆ.

ಶ್ರದ್ಧೆಗಳ ಸಂಕೇತಗಳಾದ ಸೂರ್ಯ ಚಂದ್ರರಾದಿಯಾಗಿ ಶ್ರೀಚಕ್ರ, ಕಲಶ, ಕೂರ್ಮ, ಸರ್ಪ, ಸ್ವಸ್ತಿಕ, ಶ್ರೀ, ಓಂ, ಗಾಯತ್ರಿ ಮಂತ್ರ, ಪಾದಗಳು ಹೀಗೆ ಧಾರ್ಮಿಕ ಆಚರಣೆಗಳ ಮಹತ್ವ ಮತ್ತು ಹಿನ್ನೆಲೆಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಕಲಾವಿದರು ತಮ್ಮ ಕೃತಿಯ ಮೂಲಕ ಮಾಡಿದ್ದಾರೆ.

ಡಾ.ಶಿ.ಚೆ.ನಂದಿಮಠರ ಭಾವಚಿತ್ರ

ಹಿರೇಮಠರು ಕೇವಲ ಆಧುನಿಕ ಸಂಯೋಜನೆಗಳಲ್ಲಿ ತಮ್ಮ ಪ್ರತಿಭೆಯ ಆಳವನ್ನು ತೋರಿಸುವಂತೆ ಭಾವಚಿತ್ರಗಳಲ್ಲೂ ಕಲಾಕೌಶಲ್ಯ ತೋರಿಸಿದ್ದಾರೆ. ನಂದಿಮಠರ ಈ ಭಾವಚಿತ್ರ ೧೯೭೬ರ ಸಂದರ್ಭದ ರಚನಾ ತಂತ್ರವನ್ನೇ ಈ ಭಾವಚಿತ್ರವು ಹೊಂದಿದೆ. ಅಂದಿನ ಸಂದರ್ಭದಲ್ಲಿ ಭಾವಚಿತ್ರಗಳು ನೈಜ ಸ್ವರೂಪವನ್ನು ಹೊಂದಿದ್ದವು. ಅಂತಹ ರಚನೆಗೆ ಹೆಚ್ಚಿನ ಪ್ರಾಶಸ್ತ್ಯವಿದ್ದುದನ್ನು ಈ ಭಾವಚಿತ್ರ ಪ್ರಕಟಪಡಿಸುತ್ತದೆ. ವ್ಯಕ್ತಿಯ ಮುಖದಲ್ಲಿ ಮೃದುವಾದ ವರ್ಣಗಳ ಲೇಪನವಿದೆ. ಕಣ್ಣು, ಮೂಗು,ಬಾಯಿಗಳಲ್ಲಿ ಛಾಯಾಚಿತ್ರದಲ್ಲಿ ಕಂಡುಬರುವಂತಹ ರಚನಾ ವಿವರಗಳಿವೆ. ಹಾಗೆಯೇ ಪೇಟದಲ್ಲಿ, ಉಡುಪಿನಲ್ಲೂ ಕೂಡ ವಿವರದ ಆಶಯಗಳಿವೆ. ಚರ್ಮದ ವರ್ಣವನ್ನು ಅತ್ಯಂತ ಪ್ರಬುದ್ಧವಾಗಿ ದುಡಿಸಿಕೊಂಡ ಹಿರೇಮಠರು ವ್ಯಕ್ತಿಯ ಹಿನ್ನೆಲೆಯಲ್ಲಿ ಒಳಾವರಣದ ಪರಿಸರವನ್ನು ಸಂಯೋಜಿಸಿದ್ದಾರೆ. ಮಸುಕಾಗಿ ರಚನೆಗೊಂಡಿರುವ ಗ್ರಂಥಗಳು, ರೂಪದರ್ಶಿಯ ಸಾಲುಗಳು ಸ್ಪಷ್ಟತೆಗೆ ಭಂಗ ತರುವುದಿಲ್ಲ ಎಂಬುದು ಗಮನಾರ್ಹ.

ಪ್ರಕೃತಿ ಚಿತ್ರ

ಭಾವಚಿತ್ರದ ರಚನಾ ತಂತ್ರಕ್ಕಿಂತ ವಿಭಿನ್ನ ತಂತ್ರದಡಿಯಲ್ಲಿ ರಚಿಸಲ್ಪಟ್ಟ ಚಾರಿತ್ರಿಕ ಅವಶೇಷವೊಂದರ ಚಿತ್ರವಿದು. ಪ್ರಕೃತಿ ಚಿತ್ರಣದಲ್ಲಿ ಎರಡು ಬಗೆಯ ಪ್ರಕೃತಿ ಲಕ್ಷಣಗಳನ್ನು ಅತ್ಯಂತ ಸಮರ್ಥವಾಗಿ ಗ್ರಹಿಸಿದ್ದಾರೆ. ಒಳಾವರಣ ಮತ್ತು ಹೊರಾವರಣದ ವ್ಯತ್ಯಸ್ಥಗೊಂಡ ಬೆಳಕಿನ ಪರಿಣಾಮಗಳನ್ನು ಇಲ್ಲಿ ಕಾಣಬಹುದು. ನೆರಳು ಮತ್ತು ಬಿಸಿಲುಗಳ ಛಾಯೆಗಳು ಪ್ರತಿ ರಚನೆಯಲ್ಲೂ ಪ್ರಬುದ್ಧವಾಗಿದೆ. ಅರ್ಧ ತೆರೆದ ಕಟ್ಟಿಗೆಯ ಬಾಗಿಲು ಅದಕ್ಕೆ ಹೊಂದಿಕೊಂಡಂತಿರುವ ಕಲ್ಲುಗಳಿಂದ ನಿರ್ಮಾಣವಾದ ಗಜಗಾತ್ರದ ಗೋಡೆಗಳ ರಚನೆಗಳಲ್ಲಿ ತರ್ಕಬದ್ಧ ವರ್ಣ ಬಳಕೆಯನ್ನು ಕಾಣಬಹುದಾಗಿದೆ. ಇದರಿಂದಾಗಿ ಹಿನ್ನೆಲೆ ಮುನ್ನೆಲೆಗಳ ಯಥಾದರ್ಶನದ ಅನುಭವ ದಕ್ಕುತ್ತದೆ. ಇದು ಜಲವರ್ಣಗಳನ್ನು ಪಾರದರ್ಶಕ ಹಾಗೂ ಅಪಾರದರ್ಶಕವಾಗಿ ಬಳಸಿದ ನಿಸರ್ಗ ಚಿತ್ರವಾಗಿದೆ.



ಒಟ್ಟು ರೂಪದಲ್ಲಿ ಹಿರೇಮಠರ ಕಲಾಸೃಷ್ಟಿಗಳು ತಮ್ಮ ವಸ್ತು, ವಸ್ತುವಿನ ನಿರ್ವಹಣೆ, ಮಾಧ್ಯಮ, ಮಾಧ್ಯಮಗಳ ಬಳಕೆ ಮುಂತಾದ ದೃಷ್ಟಿಯಿಂದ ವಿಶಿಷ್ಟವಾದವುಗಳು. ಅವುಗಳನ್ನು ಸಾಂಕೇತಿಕ (ಸಿಂಬಾಲಿಕ್) ಶೈಲಿಯ ಕಲಾಕೃತಿಗಳೆಂದು ಗುರುತಿಸಬಹುದು. ಅಪ್ಪಟ ಭಾರತೀಯ ಚಿಂತನೆ, ಸಾಹಿತ್ಯ, ತತ್ವಶಾಸ್ತ್ರ, ಇತರ ಕಲೆಗಳ ಪರಿಚಯದ ಪ್ರಭಾವ, ಪೂರ್ವ

ಪಶ್ಚಿಮದ ಕಲಾ ಸಂಪ್ರದಾಯಗಳ ಸೂಕ್ತ ಅಳವಡಿಕೆ, ನವ್ಯ-ಪರಂಪರೆಗಳ ಹದವರಿತ ಮೇಳಾಪ, ವ್ಯಕ್ತಿ ಮತ್ತು ಸಾರ್ವತ್ರಿಕ ಬದುಕಿನ ಅಂತರಂಗ-ಬಹಿರಂಗಗಳ ಪರಿಶೋಧ ಈ ಮುಂತಾದ ವಿಶೇಷತೆಗಳಿಂದಾಗಿ ಪ್ರತ್ಯೇಕವಾಗಿ ನಿಲ್ಲುತ್ತವೆ ಎನ್ನಬಹುದು.

ಮೃತ್ತಿಕಾ ಶಿಲ್ಪಗಳು

ಅಂಕನಗಳು, ವರ್ಣಚಿತ್ರಗಳು ಹಿರೇಮಠರ ಕಲಾ ಪ್ರತಿಭೆಯ ಒಂದು ನೋಟ ಒದಗಿಸಿದರೆ, ಅವರ ಮೃತ್ತಿಕಾ ಶಿಲ್ಪಗಳು ಅವರ ಸೃಜನಶೀಲತೆಯ ಇನ್ನೊಂದು ನೋಟ ಒದಗಿಸುತ್ತವೆ. ಬಾಲ್ಯದಿಂದಲೂ ಮೂರ್ತಿಶಿಲ್ಪ ರಚನೆಯಲ್ಲಿ ವಿಶೇಷಾಸಕ್ತಿ ಹೊಂದಿದ ಹಿರೇಮಠರು ಶಿಲ್ಪ ಶಿಕ್ಷಣ ಪಡೆಯದ, ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಗದುಗಿನ ಪ್ರಾಚೀನ ದೇವಸ್ಥಾನಗಳಲ್ಲೊಂದಾದ ತ್ರಿಕೂಟೇಶ್ವರ ದೇವಾಲಯದಲ್ಲಿನ ಸರಸ್ವತಿ ವಿಗ್ರಹವನ್ನು ಮಣ್ಣಿನಲ್ಲಿ ನಿರ್ಮಿಸಿ ಹಿರಿಯರ ಮೆಚ್ಚುಗೆ ಪಡೆದುದನ್ನು ಈಗಲೂ ನೆನೆಪಿಸಿಕೊಳ್ಳುತ್ತಾರೆ. ಮುಂದೆ ದೃಶ್ಯಕಲಾಧ್ಯಯನದ ಜೊತೆಗೆ ಮೃತ್ತಿಕಾ ಶಿಲ್ಪ ಅಧ್ಯಯನವನ್ನು ಕೈಕೊಂಡು ಮೃತ್ತಿಕಾ ಶಿಲ್ಪ-ಶಿಲ್ಪ (ಮಾಡೆಲಿಂಗ್ ಅಂಡ್ ಸ್ಕಲ್ಪಚರ್) ಡಿಪ್ಲೋಮಾ ಪಡೆದರು. ಹಿರೇಮಠರು ರಚಿಸಿದ ಕೆಲವು ಶಿಲ್ಪಗಳು, ಉಬ್ಬು ಶಿಲ್ಪಗಳು ವಿಜಯ ಕಲಾಮಂದಿರ ಮತ್ತು ಇತರ ವ್ಯಕ್ತಿ ಸಂಗ್ರಹದಲ್ಲಿವೆ. ರಾಮನಾಗಮನ ಮತ್ತು ಬುದ್ಧನ ಭಾವಶಿಲ್ಪಗಳನ್ನು ಇಲ್ಲಿ ಪರಿಶೀಲಿಸಬಹುದು.

ರಾಮನಾಗಮನ : ಪ್ಲಾಸ್ಟರ್‌ನ ೨'X೩' ಅಳತೆಯ ಒಂದು ಸಂಯೋಜನಾ ಉಬ್ಬು ಶಿಲ್ಪ. ರಾಮನಾಗಮನಕ್ಕಾಗಿ ಕಾತರಿಸುವ ವೃದ್ಧೆ ಶಬರಿ, ಭಕ್ತಿಯಿಂದ ಬೋರೆ ಹಣ್ಣುಗಳನ್ನು ಸಮರ್ಪಿಸುತ್ತಿದ್ದರೆ, ಅವನ್ನು ರಾಮನು ಪ್ರೀತಿಯಿಂದ ಸ್ವೀಕರಿಸುತ್ತಿರುವ ದೃಶ್ಯವೇ ಸಂಯೋಜನೆಯಲ್ಲಿ ಪ್ರಧಾನ ರೂಪಾಕೃತಿಯಾಗಿದ್ದು, ಹಿಂಬದಿಯಲ್ಲಿನ ಲಕ್ಷ್ಮಣ ಸಂಯೋಜನೆಯ ಒಂದು ಬದಿಯ ಮೇಲ್ಭಾಗದಲ್ಲಿ ತುಂಬಿ ನಿಂತಿದ್ದಾನೆ. ಗುಡಿಸಲು-ವೃಕ್ಷ ಮುಂತಾದ ಆಶ್ರಮ ಪರಿಸರವನ್ನು ಸಂಕ್ಷೇಪ ಸಂಕೇತಗಳ ಮೂಲಕ ಚಿತ್ರಿಸಲಾಗಿದೆ. ವಾಸ್ತವಕ್ಕೇ ಹತ್ತಿರವಾಗಿಯೂ ಆದರ್ಶೀಕೃತ ರೂಪಾಕೃತಿಗಳು ಒಟ್ಟು ಸಂಯೋಜನೆಯ ಸಮತೋಲನವನ್ನು ಕಾಯ್ದುಕೊಂಡಿರುವುದು ಈ ಉಬ್ಬು ಶಿಲ್ಪದ ವಿಶೇಷತೆಯಾಗಿದೆ.



ಬುದ್ಧ : ಶತಮಾನಗಳುದ್ದಕ್ಕೂ ದೇಶ-ವಿದೇಶಗಳ ಕಲಾವಿದರಿಗೆ ಬುದ್ಧನ ಸ್ವರೂಪ, ಜೀವನ ಘಟನೆಗಳು ಪ್ರೇರಣೆಯಾಗಿ ನಿಂತಿರುವುದು ಸರ್ವವಿದಿತ. ಹಿರೇಮಠರ ಈ ಪ್ಲಾಸ್ಟರ್ ಶಿಲ್ಪವು ಭಗವಾನ್ ಬುದ್ಧನ ಭಾವ ಶಿಲ್ಪವಾಗಿದ್ದು ಬುದ್ಧನ ಗಾಂಭೀರ್ಯವನ್ನು ಪ್ರತಿಫಲಿಸಿದೆ. ಎತ್ತಿಕಟ್ಟಿದ ಮುಡಿ, ಧ್ಯಾನಾಸಕ್ತ ಕಣ್ಣುಗಳು, ನೀಳ ಕಿವಿಗಳು ಬುದ್ಧನ ಸಾತ್ವಿಕ ವ್ಯಕ್ತಿತ್ವವನ್ನು ಸಮರ್ಪಕವಾಗಿ ಅಭಿವ್ಯಕ್ತಿಸಿವೆ. ಮುಖವೇ ಪ್ರಮುಖವಾದ ಈ ಶಿಲ್ಪವು ಕೊರಳು, ಅತ್ಯಲ್ಪ ಎದೆಭಾಗವನ್ನು ಹೊಂದಿದ್ದರೂ ಒಟ್ಟು ಶಿಲ್ಪಕ್ಕೆ ಅಂದವಾದ ನೆಲೆಯನ್ನು ಒದಗಿಸಿದೆ. ಹೀಗೆ ಹಿರೇಮಠರ ವರ್ಣಚಿತ್ರಗಳಂತೆ, ಅವರ ಮೃತ್ತಿಕಾ ಶಿಲ್ಪಗಳು ಕೂಡ ಧಾರ್ಮಿಕ ಒಲವು, ಭಾರತೀಯ ಶಿಲ್ಪ ಪರಂಪರೆಯ ವೈಲಕ್ಷಣಗಳನ್ನೇ ಬಿಂಬಿಸಿರುವುದೊಂದು ವಿಶೇಷ.

೩. ಸಾಹಿತ್ಯ ಸೃಷ್ಟಿ

ಬಿ.ಕೆ.ಹಿರೇಮಠರ ಮೂಲ ಆಸಕ್ತಿ ಇದ್ದುದು ದೃಶ್ಯಕಲೆಗಳಲ್ಲಿ. ಆದರೆ ಪರಿಸ್ಥಿತಿಯ ಅನಿವಾರ್ಯತೆ ಅವರನ್ನು ಕನ್ನಡದತ್ತ, ಪ್ರಾಧ್ಯಾಪಕ ವೃತ್ತಿಯತ್ತ ಸೆಳೆದೊಯ್ದಿತ್ತು. ಅವರು ಅದಕ್ಕಾಗಿ ಇಂದಿಗೂ ಬೇಸರಪಟ್ಟಿಲ್ಲ. ಬದಲಾಗಿ ಕನ್ನಡದಲ್ಲಿಯೂ ಗಮನಾರ್ಹ ಸಾಧನೆಗೈದಿದ್ದಾರೆ. ಸತ್ಯಾನ್ವೇಷಕ ಸಂಶೋಧಕರಾಗಿ, ಬರೆಹಗಾರರಾಗಿ ಗಮನ ಸೆಳೆದಿದ್ದಾರೆ. ಅವರ ಬರೆಹಗಳಲ್ಲಿ ಸಂಶೋಧನಾತ್ಮಕ ಲೇಖನ, ಪರಿಚಯ ಲೇಖನ, ಪ್ರಬಂಧಗಳು, ಕಲಾ ಸಾಹಿತ್ಯ, ಅನುವಾದಗಳು, ಸಾಂದರ್ಭಿಕ ಬರೆಹಗಳು, ಸಂಪಾದನಾ ಗ್ರಂಥಗಳು ಹೀಗೆ ಹಲವಾರು ಸಾಹಿತ್ಯ ರೂಪಗಳ ಸೃಷ್ಟಿ ಲೋಕಾರ್ಪಣಗೊಂಡಿದೆ.

ಪಿಹೆಚ್.ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ ಮಹಾಪ್ರಬಂಧವು ಹಿರೇಮಠರ ಸಂಶೋಧನೆ ವೈದುಷ್ಯದ ಪ್ರತೀಕವಾಗಿದೆ.ಈ ಮಹಾಪ್ರಬಂಧಕ್ಕೆ ಮುನ್ನುಡಿಯನ್ನು ಬರೆಯುತ್ತ ಖ್ಯಾತ ವಿದ್ವಾಂಸರಾದ ಡಾ.ಎಂ.ಎಂ. ಕಲಬುರ್ಗಿಯವರು "ಹಸ್ತಪ್ರತಿ ಶಾಸ್ತ್ರ.... ಸಮಗ್ರ ಅಧ್ಯಯನ ಮೊದಲಸಲ ಸಾಧ್ಯವಾದುದು ಈ ಮಹಾಪ್ರಬಂಧದಲ್ಲಿ. ಹೀಗಾಗಿ ನಮ್ಮ ಅಧ್ಯಯನ ಇತಿಹಾಸದಲ್ಲೇ ಈ ಪ್ರಬಂಧಕ್ಕೆ ವಿಶಿಷ್ಟ ಸ್ಥಾನ ಸಲ್ಲುತ್ತದೆ. ಈ ಬಗೆಯ, ಈ ವ್ಯಾಪ್ತಿಯ ಅಧ್ಯಯನ ಭಾರತದ ಬೇರೆ ಭಾಷೆಗಳಲ್ಲಿ ಜರುಗಿದುದು ಸಂದೇಹ...." ಎಂದೂ ಮುಂದುವರಿದು ಈ ಪ್ರಬಂಧದ ಹೃದಯ ಹಸ್ತಪ್ರತಿಗಳ ಕಲಾ ವಿನ್ಯಾಸ. ಸ್ವತಃ ಪ್ರಥಮ ದರ್ಜೆಯ ಚಿತ್ರಕಲಾವಿದರಾಗಿರುವ ಡಾ.ಹಿರೇಮಠರು ಕನ್ನಡಕ್ಕೆ ನೀಡಿದ ವಿಶೇಷ ಕೊಡುಗೆಯಿದು. ಹಸ್ತಪ್ರತಿಗಳ 'ಬರಹದ ವಿನ್ಯಾಸ'. 'ಚಿತ್ರಕಲಾ ವಿನ್ಯಾಸ' ಎಂದು ಕವಲೊಡೆಯುವ ಈ ಅಧ್ಯಯನ ಶಾಖೋಪಶಾಖೆಗಳಲ್ಲಿ ಬಿಚ್ಚಿಕೊಂಡು, ನಿದರ್ಶನಗಳ ಮೂಲಕ ವಿಷಯವನ್ನು ಸ್ಪಷ್ಟಗೊಳಿಸುತ್ತದೆ. ಈ ಚಿತ್ರಕಲೆಯು ಜೈನ, ವೀರಶೈವ, ಬ್ರಾಹ್ಮಣ ವಿಶಿಷ್ಟವಾಗಿಯಲ್ಲದೆ,



ಮತಾತೀತವಾಗಿ ಬೆಳೆದು ಬಂದ ರೀತಿಯನ್ನು ಪ್ರತಿಪಾದಿಸುವಲ್ಲಿ ಕರ್ನಾಟಕದ ಚಿತ್ರಕಲೆಯ ಇತಿಹಾಸವನ್ನೇ ಪುನರ್ ರಚಿಸಿಕೊಡುವ ಪ್ರಯತ್ನ ಕಾಣಿಸುತ್ತದೆ. ಹಸ್ತಪ್ರತಿಗಳಲ್ಲಿನ ರೇಖಾ ವಿನ್ಯಾಸ, ಬಣ್ಣಗಾರಿಕೆಗಳಂಥ ವಿಷಯಗಳ ಬಗ್ಗೆ ಅಧಿಕೃತವಾಗಿ ಮತ್ತು ವ್ಯಾಪಕವಾಗಿ ತಿಳಿದುಕೊಳ್ಳಬೇಕಾದರೆ ನಾವು ಈ ಅಧ್ಯಾಯಕ್ಕೆ ಮೊರೆಹೋಗಬೇಕಾಗುತ್ತದೆ.

........ಇನ್ನು ಮೇಲೆ ಈ ವಿಷಯವಾಗಿ ಯಾರೇ ಬರೆದರೂ ಇದಕ್ಕಿಂತ ಹೆಚ್ಚಿಗೆ ಹೇಳಲಾರರು. ಹೇಳಿದರೂ ಈ ಚೌಕಟ್ಟಿನಲ್ಲಿಯೇ ಹೇಳುತ್ತಾರೆ-ಎಂಬಂತೆ ಈ ಪ್ರಬಂಧ ರೂಪು ಪಡೆದಿದೆ. ಯಾವ ಕಾಲಕ್ಕೂ ಸಂದರ್ಭ ಗ್ರಂಥವೆನಿಸಲಿರುವ ಈ ಮೌಲಿಕ ಕೃತಿ ರಚನೆಗಾಗಿ ಡಾ.ಬಿ.ಕೆ. ಹಿರೇಮಠರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ" ಎಂಬುದಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಈ ಗ್ರಂಥದ, ಆ ನಿಟ್ಟಿನ ಹಿರೇಮಠರ ಸಂಶೋಧನೆಯ ಮಹತ್ವವನ್ನು ಸಾರಿ ಹೇಳುತ್ತವೆ.

ಕರ್ನಾಟಕದ ಲಲಿತಕಲಾ ಅಕಾಡೆಮಿಗಾಗಿ ಬಿ.ಕೆ. ಹಿರೇಮಠರು ಕರ್ನಾಟಕದ ಹಿರಿಯ ಕಲಾವಿದರುಗಳಾದ ಕಲಾಗುರು ಜಿ.ಎಸ್. ದಂಡಾವತಿಮಠ, ಅಮೀನಸಾಬ ಕಮಡೋಳಿ ಹಾಗೂ ಸೋಮಶೇಖರ ಸಾಲಿಯವರ ಜೀವನ ಮತ್ತು ಕಲಾ ಸಾಧನೆಯ ಕುರಿತಾದ ಪುಸ್ತಕಗಳನ್ನು ರಚಿಸಿಕೊಟ್ಟಿದ್ದಾರೆ. ಆ ಕಲಾ ಸಾಧಕರ ಬಾಲ್ಯದ ಪರಿಸರ, ಶಿಕ್ಷಣ, ಕಲಾಸಾಧನೆಗಳನ್ನು ವಸ್ತುನಿಷ್ಠವಾಗಿ ನಿರೂಪಿಸಿ ಅಕಾಡೆಮಿಯ ಪ್ರಕಟಣೆಗಳಿಗೆ ಮೌಲ್ಯವನ್ನು ತಂದುಕೊಟ್ಟಿದ್ದಾರೆ. ಈ ಪುಸ್ತಕಗಳ ಸ್ವರೂಪ ಪರಿಚಯಾತ್ಮಕವಾಗಿದ್ದರೂ, ಒಂದು ಬಗೆಯಲ್ಲಿ ಪ್ರೌಢ ಪ್ರಬಂಧದ ಭಾವವನ್ನು ಓದುಗರಿಗೆ ನೀಡುತ್ತವೆ.




ಅಲ್ಲದೆ ಲಲಿತಕಲಾ ಅಕಾಡೆಮಿ ಪ್ರಕಟಿಸಿದ ಕಲಾಕೋಶ ಹಾಗು ರಾಷ್ಟ್ರ ಪ್ರಶಸ್ತಿ ಪಡೆದ ಕಲಾವಿದರುಗಳ ಪರಿಚಯವನ್ನೊಳಗೊಂಡ ಪುಸ್ತಕಗಳ ಸಹ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಕೇವಲ ಕಲಾಸಾಹಿತ್ಯ ವಲಯವನ್ನಲ್ಲದೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೂ ಇವರ ಸಂಶೋಧನ ಲೇಖನಗಳು, ನಾಡು-ನುಡಿ-ಕಲೆ, ಸಂಸ್ಕೃತಿ ಕುರಿತಾದ ಮಹತ್ವದ ಸಾಹಿತ್ಯವಿದೆ. ಕವಿ ಕಲಾವಿದರನ್ನು ಕುರಿತಂತೆ ಕೆಲವು ವ್ಯಕ್ತಿ ಚಿತ್ರಗಳಿವೆ. ಈಶ್ವರ ಸಣಕಲ್ಲರನ್ನು ಕುರಿತು "ಮರೆಯಲಾರದ ಮಹಾನುಭಾವರು" ಎಂಬ ಶೀರ್ಷಿಕೆಯಡಿ ಪುಸ್ತಿಕೆಯನ್ನು, ರಾಜ್ಯ ಸಾಹಿತ್ಯ ಅಕಾಡೆಮಿಗಾಗಿ ಪುಸ್ತಿಕೆಯನ್ನು, ಪ್ರಭುಲಿಂಗ ಲೀಲೆಯ ಸಂಗ್ರಹಾನುವಾದವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಾಗಿ ರಚಿಸಿಕೊಟ್ಟಿದ್ದಾರೆ. ನಿರುಪಾದಿ, ಮೃತ್ಯುಂಜಯ, ಮುಂತಾದ ಗ್ರಂಥಗಳ ಸಂಪಾದಕರಾಗಿದ್ದಾರೆ. ರಾಷ್ಟ್ರ, ರಾಜ್ಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಮೌಲಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಸೃಷ್ಟಿ ಗ್ರಂಥವು ಡಾ.ಬಿ.ಕೆ ಹಿರೇಮಠರಿಗೆ ಅರವತ್ತು ತುಂಬಿದ ಸಂದರ್ಭದಲ್ಲಿ ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಪ್ರಕಟಿಸಿದೆ. ಅದರಲ್ಲಿ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನಾತ್ಮಕ ಬರೆಹಗಳ ಜೊತೆ, ವ್ಯಕ್ತಿ ಪರಿಚಯ ಲೇಖನಗಳು ಮುಂತಾಗಿ ನಲವತ್ನಾಲ್ಕು ಲೇಖನಗಳಿವೆ. 'ರಾಮನಾಥ ಚರಿತ'ದಲ್ಲಿ ದೇವತೆ, ಕುಟಿಲ ದೇವತೆಗಳ ಉಪಾಸನೆ–ಒಂದು ನೋಟ, ಪಂಪನ ಭೀಷ್ಮ: ಒಂದು ಅಪೂರ್ವ ಪಾತ್ರ ಚಿತ್ರಣ, ಕನ್ನಡ ಲಿಪಿ ಮೂಲ, ಸಾಹಿತ್ಯದ ಹಳಮ–ಒಂದು ಪರಿಶೀಲನೆ, ಕನ್ನಡ ಓಲೆಗರಿ ಗ್ರಂಥಗಳಲ್ಲಿ ಕಲಾತ್ಮಕತೆ ಇಂತಹ ಹಲವಾರು ವಿದ್ವತ್‌ಪೂರ್ಣ ಸಂಶೋಧನಾತ್ಮಕ ಲೇಖನಗಳು ಇಲ್ಲಿವೆ. ಗ್ರಂಥ ಸಂಪಾದನೆಗೆ ಪ್ರೊ.ಗೌ.ಮ.ಉಮಾಪತಿ ಶಾಸ್ತ್ರೀಗಳ ಕೊಡುಗೆ, ಕಲಾಗುರುದೇವ ಶ್ರೀ ಟಿ.ಪಿ.ಅಕ್ಕಿಯವರು ಇಂತಹ ವ್ಯಕ್ತಿಚಿತ್ರಗಳೂ, ಅನ್ಯ ಲೇಖನಗಳೂ ಇಲ್ಲಿವೆ.

ಪ್ರಸ್ತುತ ಗ್ರಂಥದ ಸಮೀಕ್ಷೆ ಮಾಡಿದ ಡಾ. ಮಾಳಿ ಅವರು ಹಿರೇಮಠರ ಲೇಖನಗಳ ಹಿಂದಿನ ಅವರ ವ್ಯಕ್ತಿತ್ವ ಬರಹ ಮತ್ತು ಕಲೆ ಕುರಿತು ಆಡುವ–"ಡಾ.ಬಿ.ಕೆ.ಹಿರೇಮಠರು ಶಿಸ್ತಿಗೆ ಹೆಸರಾದ ವಿದ್ವಾಂಸರು. ಶಿಸ್ತು ಅವರ ಬದುಕು–ಬರಹ ಮತ್ತು ಕಲಾಕೃತಿಗಳಲ್ಲಿ ಬೆಳಗುತ್ತಿದೆ." "ಡಾ.ಬಿ.ಕೆ. ಹಿರೇಮಠರ ವ್ಯಕ್ತಿತ್ವ ವೈವಿಧ್ಯಮಯ; ವರ್ಣರಂಜಿತ ಅವರ ಆಕೃತಿಯಲ್ಲಿ ಒಬ್ಬ ಕಲಾವಿದನಿದ್ದಾನೆ. ಆ ಕಲಾವಿದನ ಅಂತರಂಗದಲ್ಲೊಬ್ಬ ಸಂಶೋಧಕ! ಅವರಿಬ್ಬರಲ್ಲಿಯ ನಯ ವಿನಯ ಅಪ್ಪಟ ಪ್ರಾಮಾಣಿಕತೆ–ಪಾರದರ್ಶಕತೆ.......ಅವರನ್ನು ರೂಪಿಸುತ್ತವೆ" ಎಂಬ, ಮತ್ತೊಂದೆಡೆ "ಸಾಹಿತ್ಯ ಮತ್ತು ಚಿತ್ರಕಲೆಗಳೆರಡರ ಸೂತ್ರಗಳನ್ನು ಒಂದೇ ಕೈಯಲ್ಲಿ ಹಿಡಿದ ಶಿಸ್ತಿನ ಸಂಶೋಧಕ ಡಾ.ಬಿ.ಕೆ.ಹಿರೇಮಠರು ಕನ್ನಡದ ವಿರಳ ವಿದ್ವಾಂಸರ ಶ್ರೇಣಿಗೆ ಸೇರುತ್ತಾರೆ" ಎಂಬ ಮಾತುಗಳು ವಾಸ್ತವವನ್ನೇ ಬಿಂಬಿಸುತ್ತವೆ. ಈ ವಿದ್ವಾಂಸರ ಅಭಿಪ್ರಾಯಗಳು, ಉಲ್ಲೇಖಿತ ಗ್ರಂಥಗಳು ಹಿರೇಮಠರ ಸಾಹಿತ್ಯ ಸಾಧನೆಯನ್ನು ಅದರ ಮಹತ್ವವನ್ನು ಪರಿಚಯಿಸುತ್ತವೆ.



೧. ಡಾ.ವಿ.ಎಸ್.ಮಾಳಿ : ಡಾ.ಬಿ.ಕೆ.ಹಿರೇಮಠ ಅವರ ಲೇಖನಗಳು : ಒಂದು ಸಮೀಕ್ಷೆ (ಲೇಖನ)· ನಿಜದ ನೆಲೆ: ಪುಟ ೧೦೦೦–೧೦೦೨)



ಡಾ.ಬಿ.ಕೆ. ಹಿರೇಮಠ



ಕಲಾವಿದನ ಮಾನಸ



ದೇವರು ಮತ್ತು ಧರ್ಮಗಳು



ಸತ್ಯಕ್ಕೆ ಜಯ



ಸತ್ಯದ ಸಹನೆ



ಮಾನವೀಯತೆಯ ಕೈಗಳು



ಕೃಷ್ಣ ಮತ್ತು ಗೋಪಿಕೆಯರು



ಕಲ್ಕ





ಅಭಿಸಾರಿಕಾ





ಮಡಿಕೇರಿಗೆ ವಿದಾಯ



ವಿಶ್ವರೂಪ ದರ್ಶನ



ವಸಂತ





ಭಕ್ತ

ಪ್ರಕೃತಿ ಮತ್ತು ಪುರುಷ









ತಾಯಿ ಮಗು



ಮಗುವನ್ನಗಲಿದ ತಾಯಿ





ದುರ್ಗಾ



ಸೆರೆ



ಮೇಲಣ ಆಕಾಶ, ಕೆಳಗಣ ಭೂಮಿ



ಕಾನನದಾಳದ ಸಂಗೀತ



ನನ್ನ ಸಂಸ್ಕೃತಿ





ಡಾ.ಶಿ.ಚಿ.ನಂದೀಮಠರ ಭಾವಚಿತ್ರ



ಪ್ರಕೃತಿ ಚಿತ್ರ





ಮೃತ್ತಿಕಾ ಶಿಲ್ಪ : ಬುದ್ಧ















Gauravisu jeevanava gauravisu chaethanava
Aaradho jagavendhu bhedhavennisadhiru
Hoaruvudhae jeevana samruddhigoasuga ninage
Dhaariyaathmonnathige – Mankuthimma

Revere this life; the sinew hence
Never despise this universe
As if it belong'd to someone else
All your strife is but for the worldly affluence
Your destiny however, toward
The enlightenment of your soul – Mankuthimma



Look at this life and its sinew in awe and all the disdain as though it belonged to someone else is just unfair, it does belong to you completely. Of course all your strife here is about attaining the worldly luxuries so as to live efficiently among your fellow beings. But your destiny is towards enlightening your soul.

It seems BK Hiremath lived all his life with a similar kind of reverence about life. While trying to understand the relationship between man and

nature, and the various intricacies between, he found himself more ardently expressing based on these experiences and quests creating an oeuvre through his paintings. He seemed to have believed this would make way for his enlightenment later. His philosophy reflects his personality.

